بِسۡمِ اللّٰہِ الرَّحۡمٰنِ الرَّحِیۡمِ    نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ    وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 06

ಸಂಚಿಕೆ: 16

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

17 ಏಪ್ರಿಲ್ 2025, 17 ಶಹಾದತ್ 1404 ಹಿಜರಿ ಶಮ್ಸಿ,
18 ಶವ್ವಾಲ್ 1446 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدۡ اِمَامَنَا بِرُوۡحِ الۡقُدُسِ
وَبَارِکۡ لَنَا فِیۡ عُمُرِہٖ وَاَمۡرِہٖ۔

## ಅಲ್ಲಾಹನ ಉಪದೇಶ

وَعَلَی الَّذِیۡنَ یُطِیۡقُوۡنَہٗ
فِدۡیَۃٌ طَعَامُ
مِسۡکِیۡنٍ ؕ

(ಅಲ್ ಬಖರ: 185)

ಅಂದರೆ: (ಉಪವಾಸ ಮಾಡಲು ದೈಹಿಕ ನಿಶ್ಶಕ್ತಿಯಿದ್ದು ಆರ್ಥಿಕವಾಗಿ) ಸಮರ್ಥರಿದ್ದರೆ ಅವರು ಪ್ರಾಯಶ್ಚಿತ್ತವಾಗಿ ಒಬ್ಬ ನಿರ್ಗತಿಕನಿಗೆ ಆಹಾರವನ್ನು ನೀಡಬೇಕಾಗಿದೆ.

**ಅಲ್ಲಾಹನು ಸರ್ವಶಕ್ತನಾಗಿದ್ದಾನೆ, ಕ್ಷಯರೋಗಿಗೆ ಬೇಕಿದ್ದರೆ ಉಪವಾಸದ ಶಕ್ತಿಯನ್ನು ನೀಡಬಲ್ಲ**
**ಈ ಪವಿತ್ರ ಮಾಸದಲ್ಲಿ ನೀನು ನನ್ನನ್ನು ವಂಚಿತಗೊಳಿಸಬೇಡ ಎಂದು ಓರ್ವ ವ್ಯಕ್ತಿಯು ಪ್ರಾಮಾಣಿಕವಾಗಿ ಸರ್ವಶಕ್ತನಲ್ಲಿ ಕೇಳಿಕೊಂಡರೆ, ಅಲ್ಲಾಹನು ಅವನನ್ನು ವಂಚಿತಗೊಳಿಸುವುದಿಲ್ಲ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

## ಫಿದ್ಯದ ಮೂಲ ಉದ್ದೇಶ

ಮನುಷ್ಯನು ತನ್ನ ಸಾಮರ್ಥ್ಯಕ್ಕನುಗುಣವಾಗಿ ಅಲ್ಲಾಹನ ಕರ್ತವ್ಯಗಳನ್ನು ನಿರ್ವಹಿಸುತ್ತಿರಬೇಕು. ಉಪವಾಸದ ಕುರಿತು, ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ನುಡಿಯುತ್ತಾನೆ: **ವಇನ್ ತಸೂಮು ಖೈರುಲ್ಲಕುಮ್** (ಅಲ್-ಬಖರ: 185) ಅಂದರೆ: ನೀವು ಉಪವಾಸವನ್ನು ಅನುಷ್ಠಿಸಿದರೆ ಅದು ನಿಮಗಾಗಿ ಬಹಳ ಅನುಗ್ರಹದಾಯಕವಾಗಿದೆ.

ಫಿದ್ಯ (ಓರ್ವ ನಿರ್ಗತಿಕನಿಗೆ ಆಹಾರ ನೀಡುವುದು) ಏಕೆ ವಿಧಿಸಲ್ಪಟ್ಟಿದೆಯೋ ಎಂದು ಒಮ್ಮೆ ನನ್ನ ಮನಸ್ಸಿಗೆ ಬಂದಿತು, ಆಗ ಅದು ತೌಫೀಖ್ ಪಡೆಯುವುದಕ್ಕೆ ಎಂದು ನನಗೆ ತಿಳಿಯಿತು, ಆದ್ದರಿಂದ ಆತನಿಗೆ ಉಪವಾಸ ಅನುಷ್ಠಾನಕ್ಕೆ ತೌಫೀಖ್ ಸಿಗುತ್ತದೆ. ಸರ್ವಶಕ್ತನಾದ ಅಲ್ಲಾಹನು ಮಾತ್ರ ತೌಫೀಖ್ ನೀಡುವವನಾಗಿದ್ದಾನೆ. ಅದೇ ರೀತಿ ಪ್ರತಿಯೊಂದು ವಸ್ತುವು ಅಲ್ಲಾಹನಿಂದಲೇ ಬಯಬೇಕು. ಅಲ್ಲಾಹನು ಸರ್ವಶಕ್ತನಾಗಿದ್ದಾನೆ, ಕ್ಷಯರೋಗಿಗೆ ಬೇಕಿದ್ದರೆ ಉಪವಾಸದ ಶಕ್ತಿಯನ್ನು ನೀಡಬಲ್ಲನು ಆದ್ದರಿಂದ ಫಿದ್ಯದ ಉದ್ದೇಶವು ಆ ಶಕ್ತಿಪಡೆಯುವುದಾಗಿದೆ ಮತ್ತೆ ಇದು ಅಲ್ಲಾಹನ ಅನುಗ್ರಹದಿಂದ ಸಾಧ್ಯವಾಗುತ್ತದೆ. ನನಗೆ ಖಾತ್ರಿ ಇರುವುದೇನೆಂದರೆ ಇದೊಂದು ನಿನ್ನ ಪವಿತ್ರ ಮಾಸವಾಗಿದೆ ಅದರಿಂದ ನಾನು ವಂಚಿತನಾಗುತ್ತಿದ್ದೇನೆ ಮುಂದಿನ ವರ್ಷ ನಾನು ಬದುಕಿರುತ್ತೇನೋ ಇಲ್ಲವೋ ಗೊತ್ತಿಲ್ಲ. ನಾನು ಈ ತಪ್ಪಿದ ಉಪವಾಸಗಳನ್ನು ಮತ್ತೆ ಅನುಷ್ಠಿಸಲು ಸಾಧ್ಯವಾಗುತ್ತದೆಯೋ ಇಲ್ಲವೊ ನನಗೆ ತಿಳಿದಿಲ್ಲ. ಹೀಗೆ ಅವನು ಅಲ್ಲಾಹನಲ್ಲಿ ಸಹಾಯಕ್ಕಾಗಿ ಪ್ರಾರ್ಥಿಸಿದರೆ, ಅಂತಹ ಮನಸ್ಸಿಗೆ ಅಲ್ಲಾಹನು ಶಕ್ತಿಯನ್ನು ನೀಡುತ್ತಾನೆ.

ಅಲ್ಲಾಹನು ಇಚ್ಛಿಸಿದ್ದರೆ, ಅವನು ಇತರ ಉಮ್ಮತ್‌ಗಳಂತೆ ಈ ಉಮ್ಮತ್ತಿನಲ್ಲಿ ಯಾವ ಮಾನದಂಡಗಳನ್ನು ಇರಿಸುತ್ತಿರಲಿಲ್ಲ, ಆದರೆ ಅವನು ಮಾನದಂಡಗಳನ್ನು  ಒಳ್ಳೆಯದಕ್ಕಾಗಿ ಇರಿಸಿದ್ದಾನೆ, ನನ್ನ ದೃಷ್ಟಿಯಲ್ಲಿ ಓರ್ವ ಮನುಷ್ಯ ನೈಜ್ಯವಾಗಿ ಹಾಗೂ ಸಂಪೂರ್ಣ ವಿಧೇಯನಾಗಿ ಅಲ್ಲಾಹನ ಆಸ್ತಾನದಲ್ಲಿ ಈ ಪವಿತ್ರ ಮಾಸಲದಲ್ಲಿ ನೀನು ನನಗೆ ವಂಚಿತನಾಗಿಸಬೇಡ ಎಂದು ಕೇಳಿಕೊಂಡರೆ ಅಲ್ಲಾಹನು ಅವನನ್ನು ವಂಚಿತನಾಗಿಸುವುದಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಮನುಷ್ಯನು ರಮಝಾನ್ ಮಾಸದಲ್ಲಿ ರೋಗಗ್ರಸ್ತನಾದರೆ ಅವನ ಆ ರೋಗವು ಅವನಿಗಾಗಿ (ರಹ್ಮತ್) ಅನುಗ್ರಹವಾಗಿರುವುದು. ಏಕೆಂದರೆ ಪ್ರತಿಯೊಂದು ಕಾರ್ಯವು ನಿಯತ್ತಿನಲ್ಲಿ ಅವಲಂಬಿತವಾಗಿದೆ. ಆದ್ದರಿಂದ ಮೂಮಿನ್ ತನ್ನ ಅಸ್ತಿತ್ವದಿಂದ ತನ್ನನ್ನು ಅಲ್ಲಾಹನ ಮಾರ್ಗದಲ್ಲಿ ಧೈರ್ಯಶಾಲಿ ಎಂದು ಸಾಬಿತುಗೊಳಿಸಬೇಕು. ಯಾವ ವ್ಯಕ್ತಿಯು ಉಪವಾಸದಿಂದ ವಂಚಿತನಾಗಿರುತ್ತಾನೊ, ಆದರೆ ಅವನ ಮನಸ್ಸಿನಲ್ಲಿ ಆತನು ಆರೋಗ್ಯವಂತನಾಗಿರುತ್ತಿದರೆ ಅವನು ಸಹ ಉಪವಾಸಗಳನ್ನು ಅನುಷ್ಠಿಸುತ್ತಿದ್ದನು ಎಂಬ ನಿಯ್ಯತ್ ಹಾಗೂ ನೋವು ಇದ್ದರೆ ದೇವದೂತರು ಅವನಿಗಾಗಿ ಉಪವಾಸ ಮಾಡುತ್ತಾರೆ. ಅದಕ್ಕೆ ಶರತ್ತು ಏನೆಂದರೆ ಆತನು ನೆಪ ಮಾಡುವವನಾಗಬಾರದು ಹೀಗಿದ್ದಲ್ಲಿ ಸರ್ವಶಕ್ತನಾದ ಅಲ್ಲಾಹನು ಅವನಿಗೆ ಪ್ರತಿಫಲದಿಂದ ವಂಚಿತನಾಗಿರಿಸುವುದಿಲ್ಲ.

ಇದೊಂದು ಸೂಕ್ಷ್ಮ ವಿಷಯವಾಗಿದೆ ಓರ್ವ ವ್ಯಕ್ತಿಯು (ಅವನ ಸೋಮಾರಿತನದಿಂದಾಗಿ) ಉಪವಾಸವು ಕಠಿಣವಾಗಿದ್ದರೆ ಮತ್ತು ಅವನು ತನ್ನ ಮನಸ್ಸಿನಲ್ಲಿ ನಾನು ಅನಾರೋಗ್ಯದಿಂದ ಬಳಲುತ್ತಿದ್ದೇನೆ, ನಾನು ಒಂದು ಸಮಯದಲ್ಲಿ ತಿನ್ನದಿದ್ದರೆ ನನ್ನ ಆರೋಗ್ಯದಲ್ಲಿ ತೊಂದರೆಗಳನ್ನು ಉಂಟಾಗಬಹುದು ಎಂದು ಭಾವಿಸಿದರೆ ಅಂತಹ ವ್ಯಕ್ತಿಯು ಅಲ್ಲಾಹನ ಅನುಗ್ರಹವನ್ನು ಸ್ವತಃ ತನ್ನ ಮೇಲೆ ಕಠಿಣವಾಗಿರಿಸುವವನು. ಅವನು ಹೇಗೆ ಅಲ್ಲಾಹನ ಅನುಗ್ರಹವನ್ನು ಪಡೆಯುತ್ತಾನೆ. ಹಾಂ! ಯಾರು ತನ್ನ ಮನಸ್ಸಿನಲ್ಲಿ ರಮಝಾನ್‌ನ ಆಗಮನದ ಕುರಿತು ಸಂತೋಷಗೊಳ್ಳುತ್ತಾನೊ ಆತನು ರಮಝಾನ್‌ನ ಪವಿತ್ರ ಮಾಸ ಯಾವಾಗ ಬರುವುದೊ, ಯಾವಾಗ ಉಪವಾಸಗಳನ್ನು ಅನುಷ್ಠಿಸುವುದೊ ಮತ್ತು ಆತನು ತನ್ನ ಅನಾರೋಗ್ಯದಿಂದಾಗಿ ಉಪವಾಸಗಳನ್ನು ಅನುಷ್ಠಿಸದಿದ್ದರೆ ಆತನ ಆಕಾಶದಲ್ಲಿ ಉಪವಾಸಗಳಿಂದ ವಂಚಿತನಾಗಿರುವುದಿಲ್ಲ. ಈ ಲೋಕದಲ್ಲಿ ಅನೇಕ ಜನರು ನೆಪಗಳನ್ನು ಮಾಡುವವರಾಗಿದ್ದರೆ ಅವರು ಯೋಚಿಸುವುದೇನೆಂದರೆ ನಾವು ಹೇಗೆ ಲೋಕದ ಜನರನ್ನು ಮೋಸಗೊಳಿಸುತ್ತೇವೊ ಹಾಗೆಯೇ ಅಲ್ಲಾಹನ್ನು ಸಹ ಮೊಸಗೊಳಿಸುತ್ತೇವೆ. ನೆಪ ಮಾಡುವವರು ತಮ್ಮ ಕಡೆಯಿಂದಲೇ ಅನೇಕ ಸಮಸ್ಯೆಗಳನ್ನು ಸೃಷ್ಠಿಸಿಕೊಳ್ಳುತ್ತಾರೆ ಮತ್ತು ಅನಾನುಕೂಲಗಳನ್ನು ಸೇರಿಸಿ ಈ ಸಮಸ್ಯೆಗಳನ್ನು ಸಮರ್ಥಿಸುತ್ತಾರೆ. ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಲ್ಲಿ ಅವು ಮಾನ್ಯವಾಗಿಲ್ಲ, ತೊಂದರೆಗಳ ವಿಷಯವು ಬಹಳ ವಿಷಾದವಾಗಿದೆ ಮನುಷ್ಯನು ಬಯಸಿದರೆ ಅವನು ತನ್ನ ಜೀವನದುದ್ದಕ್ಕೂ ಕುಳಿತು ಪ್ರಾರ್ಥಿಸುತ್ತಿದ್ದರು ಮತ್ತು ರಮಝಾನ್‌ನಲ್ಲಿ ಉಪವಾಸಗಳನ್ನು ಅನುಷ್ಠಿಸದಿದ್ದರು, ಅಲ್ಲಾಹನು ಆತನ ಉದ್ದೇಶ ಮತ್ತು ಪ್ರಾಮಾಣಿಕತೆಯನ್ನು ತಿಳಿದಿದ್ದಾನೆ, ಆತನು ಎಂತಹ ಪ್ರಾಮಾಣಿಕನಾಗಿದ್ದಾನೆ ಎಂದು. ಮತ್ತು ಸರ್ವಶಕ್ತನಾದ ಅಲ್ಲಾಹನಿಗೆ ಅರಿವಿದೆ ಆತನ ಮನಸ್ಸಿನಲ್ಲಿ ನೋವು ಇದೆ ಮತ್ತು ಅಲ್ಲಾಹನು ಆತನಿಗೆ ಪ್ರತಿಫಲಕ್ಕಿಂತ ಹೆಚ್ಚಿನದನ್ನು ನೀಡುತ್ತಾನೆ ಏಕೆಂದರೆ ಹೃದಯದ ನೋವು ಅಮೂಲ್ಯವಾದ ವಸ್ತುವಾಗಿದೆ. ಮನುಷ್ಯನು ನೆಪವನ್ನು ಮಾಡುತ್ತಾನೆ ಆದರೆ ಅಲ್ಲಾಹನ ಮುಂದೆ ಈ ನೆಪಗಳು ಯವ ವಸ್ತುವಲ್ಲ. ನಾನು ಆರು ತಿಂಗಳು ಉಪವಾಸಗಳನ್ನು ಅನುಷ್ಠಿಸಿದಾಗ ಒಮ್ಮೆ ಒಂದು ಪ್ರವಾದಿಗಳ ಗುಂಪು ನನ್ನನ್ನು (ಕಾಶ್ಫ್‌ನಲ್ಲಿ) ಭೇಟಿಯಾದರು  ಅವರು ಹೇಳಿದರು: ನೀನು ನಿನ್ನ ಆತ್ಮವನ್ನು ಏಕೆ ಇಷ್ಟು ಕಷ್ಟದಲ್ಲಿ ಸಿಲುಕಿಸುತ್ತೀಯ, ಅದರಿಂದ ಹೊರಬರು. ಹೀಗೆ ಮನುಷ್ಯ ತನ್ನನ್ನು ತಾನು ಅಲ್ಲಾಹನಿಗಾಗಿ ತೊಂದರೆಗಳನ್ನು ಅನುಭವಿಸಿದರೆ ಅವನು ಸ್ವತಃ ಪೋಷಕರಂತೆ ಕರುಣೆ ತೋರಿಸಿ ನೀನು ಏಕೆ ತೊಂದರೆಯಲ್ಲಿದ್ದೀಯ ಎಂದು ಕರುಣೆ ತೋರುತ್ತಾನೆ.

**(ಮಲ್‌ಫೂಝಾತ್, ಸಂಪುಟ-3, ಪುಟ-426, ಪ್ರಕಟಿತ 2018 ಖಾದಿಯನ್)**

# ಖುತ್‌ಬ ಜುಮುಅ

ಒಂದು ದಿನ, ಸರ್ವಶಕ್ತನಾದ ಅಲ್ಲಾಹನು ಹಝ್ರ್‌ರತ್ ಪೈಗಂಬರ್(ಸ) ಅವರಿಗೆ ಈ ನಗರದ ವಿಜಯವು ಹಝ್ರ್‌ರತ್ ಅಲಿ(ರ) ಅವರ ಕೈಗಳಿಗೆ ಮೀಸಲಾಗಿದೆ ಎಂದು ಹೇಳಿದರು. ಅವರು ಬೆಳಿಗ್ಗೆ ಇಸ್ಲಾಂನ ಕಪ್ಪು ಧ್ವಜವನ್ನು ಅಲ್ಲಾಹನು, ಅವನ ಸಂದೇಶವಾಹಕರು ಮತ್ತು ಮುಸ್ಲಿಮರು ಪ್ರೀತಿಸುವವನ ಕೈಯಲ್ಲಿ ಇಡುವುದಾಗಿ ಘೋಷಿಸಿದರು. ಸರ್ವಶಕ್ತನಾದ ಅಲ್ಲಾಹನು ಈ ಕೋಟೆಯ ವಿಜಯವನ್ನು ಅವರ ಕೈಯಲ್ಲಿ ನಿಗದಿಪಡಿಸಿದ್ದಾನೆ. ಮರುದಿನ ಬೆಳಿಗ್ಗೆ, ಹಝ್ರ್‌ರತ್ ಪೈಗಂಬರ್(ಸ) ಹಝ್ರ್‌ರತ್ ಅಲಿ(ರ) ಅವರನ್ನು ಕರೆದು ಧ್ವಜವನ್ನು ಅವರಿಗೆ ಹಸ್ತಾಂತರಿಸಿದರು...... ಅವರು ಸಹಾಬಗಳ ಸೈನ್ಯದೊಂದಿಗೆ ಕೋಟೆಯ ಮೇಲೆ ದಾಳಿ ಮಾಡಿದರು. ಯಹೂದಿಗಳು ಕೋಟೆಯಲ್ಲಿದ್ದರೂ, ಸರ್ವಶಕ್ತನಾದ ಅಲ್ಲಾಹನು ಹಝ್ರ್‌ರತ್ ಅಲಿ(ರ.ಅ) ಮತ್ತು ಇತರ ಸಹಾಬರಿಗೆ ಆ ದಿನ ಅದೆಷ್ಟು ಶಕ್ತಿಯನ್ನು ನೀಡಿದನೆಂದರೆ, ಸಂಜೆಯ ಮೊದಲು ಮೊದಲ ಕೋಟೆಯನ್ನು ವಶಪಡಿಸಿಕೊಳ್ಳಲಾಯಿತು."

ಶತ್ರುಗಳೊಡನೆ ಮುಖಾಮುಖಿಯಾಗಲು ಬಯಸಬೇಡಿರಿ. ಅಲ್ಲಾಹನಲ್ಲಿ ಸಂರಕ್ಷಣೆಯನ್ನು ಯಾಚಿಸಿರಿ. ನಿಮ್ಮನ್ನು ಯಾವ ಪರೀಕ್ಷಣೆಗೆ ಹಾಕಲಾಗುವುದು ಎಂದು ನಿಮಗೆ ಗೊತ್ತಿಲ್ಲ. ನೀವು ಶತ್ರುಗಳ ಮುಂದೆ ಬರುವಾಗ ಹೀಗೆ ದುಆ ಮಾಡಿರಿ:
**ಅಲ್ಲಾಹುಮ್ಮ ಅನ್ತ ರಬ್ಬಿ ವ ರಬ್ಬುಹುಮ್ ವನವಾಸೀನಾ ನವಾಸೀಹುಮ್ ಬಿಯದಿಕ ವ ಇನ್ನಮಾ ತಖ್ತುಲುಹುಮ್ ಅನ್ತ**
ಹೇ ಅಲ್ಲಾಹ್, ನೀನು ನಮ್ಮ ಮತ್ತು ಅವರ ಪರಿಪಾಲಕನಾಗಿರುವೆ. ಅವರ ಭವಿಷ್ಯ ಮತ್ತು ನಮ್ಮ ಭವಿಷ್ಯ ನಿನ್ನ ಕೈಯಲ್ಲಿವೆ. ನೀನೇ ಅವರನ್ನು ವಧಿಸುವೆ.

**ಖೈಬರ್ ಯುದ್ಧದ ಯುದ್ಧದ ಸಂದರ್ಭದಲ್ಲಿ ಹಝ್ರ್‌ರತ್ ಪೈಗಂಬರ್(ಸ) ಅವರ ಪವಿತ್ರ ಜೀವನ ಚರಿತ್ರೆಯ ನಿರೂಪಣೆ.**

ವಿಶೇಷವಾಗಿ ಫಲಸ್ತೀನರಿಗೆ ಮತ್ತು ಸಾಮಾನ್ಯವಾಗಿ ಮುಸ್ಲಿಮರಿಗಾಗಿ ದುಆ ಮಾಡುವುದಾಗಿ ಕೋರಿಕೆ, ಅದೇ ರೀತಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಅಹ್ಮದಿಯರಿಗಾಗಿಗೂ ದುಆ ಮಾಡುವುದಾಗಿ ಕೋರಿಕೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **07–02–2025** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಖೈಬರ್ ಯುದ್ಧದ ಪ್ರಸ್ತಾಪ ನಡೆಯುತ್ತಿತ್ತು. ಹಝ್ರ್‌ರತ್ ಪೈಗಂಬರ್(ಸ) ಖೈಬರಿನ ಕಡೆಗೆ ಹೊರಟ ಬಗ್ಗೆಗಿನ ವಿವರಣೆ ಹೀಗಿದೆ: ಹಝ್ರ್‌ರತ್ ಪೈಗಂಬರ್(ಸ)ರ ನಾಯಕತ್ವದಲ್ಲಿ 1600 ತ್ಯಾಗಶೀಲರ ಸೈನ್ಯ ಮದೀನದಿಂದ ಹೊರಟಿತು. ಹೊರಡುವುದಕ್ಕೆ ಮುಂಚಿತವಾಗಿ ಹಝ್ರ್‌ರತ್ ಪೈಗಂಬರ್(ಸ) ಒಂದು ಗುಪ್ತಚರ ಸಂಘವನ್ನು ಮುಂದಕ್ಕೆ ಕಳುಹಿಸಿದ್ದರು. ಸೇನೆಗೆ ಮುಂದೆಮುಂದೆಯಾಗಿ ಇದ್ದುಕೊಂಡು ಮಾರ್ಗಗಳ ಬಗ್ಗೆ ಮತ್ತು ಸ್ಥಿತಿಗತಿಗಳ ಗೊತ್ತುಮಾಡುವುದು ಆ ಸಂಘದ ಕೆಲಸವಾಗಿತ್ತು. ಆ ಸಂಘದ ನಾಯಕ ಹಝ್ರ್‌ರತ್ ಅಬಾದ್ ಬಿನ್ ಬಿಶ್ರ್ ಆಗಿದ್ದರು. ಖೈಬರಿನ ಮಾರ್ಗಗಳನ್ನು ತಿಳಿಯಲಿಕ್ಕಾಗಿ ಇಪ್ಪತ್ತು ಸಾ ಖರ್ಜೂರದ ವೇತನಕ್ಕೆ ಇಬ್ಬರು ಮಾರ್ಗದರ್ಶಕರನ್ನು ನೇಮಿಸಲಾಯಿತು. ಇಪ್ಪತ್ತು ಸಾ' ಎಂದರೆ ಐವತ್ತು ಕಿಲೋ. ಅವರ ಹೆಸರುಗಳನ್ನು ಹಸೀಲ್ ಬಿನ್ ಖರಿಜಾ ಅಶ್‌ಜೀ ಮತ್ತು ಅಬ್ದುಲ್ಲಾ ಬಿನ್ ನುಐಮ್ ಎಂದು ಹೇಳಲಾಗಿದೆ ಮತ್ತು ಇವರಿಬ್ಬರೂ ಅಶ್‌ಜಾ ಗೋತ್ರಕ್ಕೆ ಸೇರಿದವರಾಗಿದ್ದರು.

ಮದೀನದಿಂದ ಖೈಬರಿನ ಕಡೆಗೆ ಹೋಗುತ್ತಾ ಅನೇಕ ಸ್ಥಳಗಳಲ್ಲಿ ತಂಗುತ್ತಾ **ಸುಹ್‌ಬಾ** ಎಂಬ ಪ್ರದೇಶದಲ್ಲಿ ಡೇರೆ ಹಾಕಲಾಯಿತು. ನಮಾಝ್‌ನ ಸಮಯವಾದಾಗ ಅಲ್ಲಿ ನಮಾಝ್ ನಿರ್ವಹಿಸಲಾಯಿತು. ಬುಖ಼ಾರಿಯಲ್ಲಿ ಹೀಗೆ ವರದಿಯಾಗಿದೆ: ಸುಹ್‌ಬಾದಲ್ಲಿ ಹಝ್ರ್‌ರತ್ ಪೈಗಂಬರ್(ಸ) ಅಸರಿನ ನಮಾಝ್ ನಿರ್ವಹಿಸಿದರು. ಅನಂತರ ಆಹಾರವನ್ನು ತರಿಸಲಾಯಿತು. ಸೈನಿಕರ ಬಳಿ ಹುರಿದ ಧಾನ್ಯದ ಪುಡಿ ಮಾತ್ರ ಇತ್ತು. ಹಝ್ರ್‌ರತ್ ಪೈಗಂಬರ್(ಸ) ಮತ್ತು ಸಹಾಬಿಯರು ಅದನ್ನೇ ಸೇವಿಸಿದರು. ವರದಿಗಾರ ಹೇಳುತ್ತಾರೆ: ಅನಂತರ ಹಝ್ರ್‌ರತ್ ಪೈಗಂಬರ್(ಸ) ಮಗ್ರಿಬಿನ ನಮಾಝ್‌ಗಾಗಿ ಎದ್ದರು ಮತ್ತು ಬಾಯಿ ಮುಕ್ಕಳಿಸಿದರು. ನಾವು ಸಹ ಬಾಯಿ ಮುಕ್ಕಳಿಸಿದೆವು. ಅನಂತರ ಹಝ್ರ್‌ರತ್ ಪೈಗಂಬರ್(ಸ) ನಮಾಝ್ ಸಲ್ಲಿಸಿದರು. ಪುನಃ ವುಝೂ ಮಾಡಲಿಲ್ಲ. ಸಹ್‌ಬಾ ಮತ್ತು ಖೈಬರ್ ನಡುವೆ ಹನ್ನೆರಡು ಮೈಲುಗಳ ಅಂತರವಿತ್ತು.

ಯಾತ್ರೆಯ ವೇಳೆ ಕೆಲವು ಘಟನೆಗಳು ನಡೆದುವು. ತುರ್ತು ಪರಿಸ್ಥಿತಿಗಳಲ್ಲೂ ಹಝ್ರ್‌ರತ್ ಪೈಗಂಬರ್(ಸ) ಸಹಾಬಿಯರ ತರಬೇತಿಯ ಬಗ್ಗೆ ಎಷ್ಟು ಕಾಳಜಿ ವಹಿಸುತ್ತಿದ್ದರು ಎಂಬುದು ಇದರಿಂದ ಗೊತ್ತಾಗುತ್ತದೆ. ಅವರು ಶಿಸ್ತು ಮತ್ತು ಅನುಸರಣೆಯಂತಹ ಗುಣಗಳನ್ನು ಉಂಟುಮಾಡುವುದರ ಬಗ್ಗೆ ಗಮನ ಸೆಳೆಯುತ್ತಿದ್ದರು.

ಹೀಗೊಂದು ಘಟನೆ ವರದಿಯಾಗಿದೆ. ಒಂದು ರಾತ್ರಿ ಸೇನೆಯ ಮುಂದೆ ಮುಂದೆಯಾಗಿ ಒಂದು ಹೊಳೆಯುವ ವಸ್ತು ಚಲಿಸುತ್ತಿರುವುದಾಗಿ ಕಂಡುಬಂತು. ಹಝ್ರ್‌ರತ್ ಪೈಗಂಬರ್(ಸ) ಚಿಂತಿತರಾದರು. ಅದರ ಬಗ್ಗೆ ಗೊತ್ತು ಮಾಡಲಾದಾಗ, ಇಸ್ಲಾಮಿನ ಸೈನ್ಯದ ಒಬ್ಬ ಸೈನಿಕನು ಸೈನ್ಯವನ್ನು ತೊರೆದು ಎಲ್ಲರ ಮುಂದೆ ಚಲಿಸುತ್ತಿದ್ದಾನೆಂದು ಅವರಿಗೆ ತಿಳಿಯಿತು. ಅವನ ಶಿರಸ್ತ್ರಾಣ ಬೆಳ್ಳಿಯಿಂದ ಹೊಳೆಯುತ್ತಿತ್ತು ಮತ್ತು ಅವನ ಹೆಸರು ಅಬು ಅಬ್ಸ್(ರ) ಆಗಿದ್ದರು. ಹಝ್ರ್‌ರತ್ ಪೈಗಂಬರ್(ಸ) ಹೇಳಿದರು, "ಅವನನ್ನು ನನ್ನ ಬಳಿಗೆ ಕರೆತನ್ನಿ." ಹಝ್ರ್‌ರತ್ ಅಬ್ಸ್(ರ) ಹೇಳುತ್ತಾರೆ ನನ್ನ ಬಗ್ಗೆ ನಾನು ಯಾವುದೋ ತಪ್ಪು ಮಾಡಿರಬಹುದ ಆದ್ದರಿಂದ ನನ್ನ ಬಗ್ಗೆ ಏನೋ ಬಹಿರಂಗವಾಗಿರಬಹುದು ಎಂದು ಭಯಭೀತನಾಗಿದ್ದೆ. ಅವರು ಭಯದಿಂದ ಹಝ್ರ್‌ರತ್ ಪೈಗಂಬರ್(ಸ) ರವರ ಸನ್ನಿಧಿಗೆ ಬಂದರು. ಹಝ್ರ್‌ರತ್ ಪೈಗಂಬರ್(ಸ) ಅವರು ಸೈನ್ಯವನ್ನು ಬಿಟ್ಟು ಏಕೆ ಮುಂದೆ ಸಾಗುತ್ತಿದ್ದೀರಾ? ಎಂದು ಕೇಳಿದರು. ಆದಾಗ್ಯೂ, ಅವರು ಒಂದು ನೆಪ ಹೇಳಿದರು. ಸೈನ್ಯದೊಂದಿಗೆ ಹೋಗಬೇಕೆಂದು ಹಝ್ರ್‌ರತ್ ಪೈಗಂಬರ್(ಸ) ಸಲಹೆ ನೀಡಿದರು. ಅದಾದ ನಂತರ, ಹಝ್ರ್‌ರತ್ ಪೈಗಂಬರ್(ಸ) ಅವರೊಂದಿಗೆ ಮಾತನಾಡಲು ಪ್ರಾರಂಭಿಸಿದರು. ಈ ಯುದ್ಧಕ್ಕೆ ಹೋಗಲು ಯಾವುದೇ ಮಾರ್ಗವಿಲ್ಲದ ಬಡ ಸಹಾಬರಲ್ಲಿ ಅವರು ಒಬ್ಬರಾಗಿದ್ದರು ಮತ್ತು ಅವರು ಹಝ್ರ್‌ರತ್ ಪೈಗಂಬರ್(ಸ) ರವರ ಬಳಿಗೆ ಬಂದು, "ಯಾ ರಸೂಲಲ್ಲಾಹ್(ಸ)! ನನಗೆ ಜೀವನೋಪಾಯವಿಲ್ಲ ಮತ್ತು ಮನೆಯಲ್ಲಿ ಸಾಮಗ್ರಿಯೂ ಇಲ್ಲ. ಇದನ್ನು ಕೇಳಿ, ಹಝ್ರ್‌ರತ್ ಪೈಗಂಬರ್(ಸ) ರವರು ತಮ್ಮ ಮೇಲಂಗಿಗಳಲ್ಲಿ ಒಂದನ್ನು ಅವರಿಗೆ ನೀಡಿದರು. ಈ ಬುದ್ಧಿವಂತ ಸಹಾಬಿಯು ಈ ಮೇಲಂಗಿಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಹಝ್ರ್‌ರತ್ ಪೈಗಂಬರ್(ಸ) ಅದನ್ನು ತನಗೆ ನೀಡಿದರು ಎಂದು ಹೇಳಿ ಎಂಟು ದಿರ್ಹಮ್‌ಗಳಿಗೆ ಅದನ್ನು ಮಾರಿದರು. ಆ ಎಂಟು ದಿರ್ಹಮ್‌ನಲ್ಲಿ ಅವರು ಎರಡು ದಿರ್ಹಮ್‌ಗಳಿಂದ ತಮ್ಮ ಕುಟುಂಬವನ್ನು ಪೋಷಿಸಿದರು. ಅವರು ಖರ್ಚು ಇತ್ಯಾದಿಗಳನ್ನು ತೆಗೆದುಕೊಂಡರು. ಅವರು ಎರಡು ದಿರ್ಹಮ್‌ಗಳ ಯುದ್ಧದಲ್ಲಿ ಭಾಗವಹಿಸಲು ಮಾರ್ಗ ವ್ಯಚ್ಛವಾಗಿ ತೆಗೆದುಕೊಂಡನು ಅದೇ ರೀತಿ ತನಗಾಗಿ ನಾಲ್ಕು ದಿರ್ಹಮ್‌ಗಳ ಮೇಲಂಗಿಯನ್ನು ಖರೀದಿಸಿ ಸೈನ್ಯಕ್ಕೆ ಸೇರಿದರು. ಸಂಭಾಷಣೆಯ ಸಮಯದಲ್ಲಿ, ಹಝ್ರ್‌ರತ್ ಪೈಗಂಬರ್(ಸ) ಅವರನ್ನು ಕೇಳಿದರು, "ನಾನು ನಿಮಗೆ ನೀಡಿದ ಮೇಲಂಗಿ ಎಲ್ಲಿದೆ?" ನಾನು ಅದನ್ನು ಮಾರಿಬಿಟ್ಟಿದ್ದೇನೆ ಎಂದು ಅವರು ಹೇಳಿದರು ಮತ್ತು ನಂತರ ವಿವರಿಸಿದ ಎಲ್ಲಾ ವಿವರಗಳನ್ನು

ವಿವರಿಸಿದರು. ಅಬು ಅಬ್ಸ್(ರ) ಅವರಿಂದ ಇದನ್ನು ಆಲಿಸಿದ ನಂತರ, ಹಝ್ರತ್ ಪೈಗಂಬರ್(ಸ) ಮುಗುಳ್ನಗುತ್ತಾ ಹೇಳಿದರು:

ಓ ಅಬು ಅಬ್ಸ್! ನೀವು ಈಗ ತುಂಬಾ ಬಡವರಾಗಿದ್ದೀರಿ. ನನ್ನ ಆತ್ಮ ಯಾರ ಕೈಯಲ್ಲಿದೆಯೋ ಅವನ ಮೇಲೆ ನಾನು ಆಣೆಯಿಟ್ಟು ಹೇಳುತ್ತೇನೆ, ನೀವು ದೀರ್ಘಕಾಲ ಬದುಕಿದರೆ, ಸ್ವಲ್ಪ ಸಮಯದ ನಂತರ ನಿಮ್ಮ ಜೀವನೋಪಾಯವು ಬಹಳವಾಗಿ ವೃದ್ಧಿಯಾಗುವುದನ್ನು ನೀವು ನೋಡುತ್ತೀರಿ. ನಿಮ್ಮ ಕುಟುಂಬಕ್ಕೆ ಆಹಾರ ಮತ್ತು ಆಹಾರವು ಬಹಳವಾಗಿ ಹೆಚ್ಚಾಗುತ್ತದೆ. ನಿಮಗೆ ಹೇರಳವಾದ ದಿರ್ಹಮ್‌ಗಳು, ದಿನಾರ್‌ಗಳು ಮತ್ತು ಹೇರಳವಾದ ಗುಲಾಮರು ಇರುತ್ತಾರೆ, ಆದರೆ ಇದೆಲ್ಲವೂ ನಿಮಗೆ ತುಂಬಾ ಒಳ್ಳೆಯದಲ್ಲ.

ಹಝ್ರತ್ ಅಬು ಅಬ್ಸ್(ರ.ಅ) ಅವರು ಹಝ್ರತ್ ಪೈಗಂಬರ್(ಸ) ರವರ ಈ ಭವಿಷ್ಯವಾಣಿಯು ನೆರವೇರುವುದನ್ನು ತಮ್ಮ ಕಣ್ಣಿನಿಂದಲೇ ನೋಡಿದರು ಮತ್ತು ಅವರು ಹೇಳುತ್ತಿದ್ದರು: "ಅಲ್ಲಾಹನ ಆಣೆ! ಎಲ್ಲವೂ ಹಝ್ರತ್ ಪೈಗಂಬರ್(ಸ) ಹೇಳಿದಂತೆ ನಿಖರವಾಗಿ ನಡೆಯಿತು."

ಅಬು ಅಬ್ಸ್(ರ.ಅ) ರವರ ಪರಿಚಯವೆಂದರೆ ಅವರ ಮೂಲ ಹೆಸರು ಅಬ್ದುಲ್ ಉಜ್ಜಾ, ಇದನ್ನು ಹಝ್ರತ್ ಪೈಗಂಬರ್(ಸ) ಅವರು ಅಬ್ದುರ್ ರಹಮಾನ್ ಎಂದು ಬದಲಾಯಿಸಿದರು. ಅವರು ಎಪ್ಪತ್ತು ವರ್ಷ ಬದುಕಿದರು ಮತ್ತು ಹಝ್ರತ್ ಉಸ್ಮಾನ್(ರ.ಅ) ರವರ ಖಲೀಫತ್ ಅವಧಿಯಲ್ಲಿ ನಿಧನರಾದರು. ಹಝ್ರತ್ ಉಸ್ಮಾನ್(ರ.ಅ) ಅವರ ನಮಾಝೆ ಜನಾಝವನ್ನು ನಿರ್ವಹಿಸಿದರು ಮತ್ತು ಅವರನ್ನು ಜನ್ನತುಲ್ ಬಖಿಯಲ್ಲಿ ದಫನ್ ಮಾಡಲಾಯಿತು. ಹಝ್ರತ್ ಪೈಗಂಬರ್(ಸ) ಬನು ಫತ್‌ಫಾನ್ ಗೋತ್ರಕ್ಕೂ ಮೈತ್ರಿ ಸಂದೇಶವನ್ನು ಕಳುಹಿಸಿದರು.

ಈಗಷ್ಟೇ ಹೇಳಿದಂತೆ, ಖೈಬರ್ ಕಡೆಗೆ ಮುನ್ನಡೆಯುತ್ತಿರುವಾಗ, ಹಝ್ರತ್ ಪೈಗಂಬರ್(ಸ) ಸಹ್‌ಬಾ ಸ್ಥಳದಲ್ಲಿ ತಂಗಿ ಅಲ್ಲಿ ಅಸರ್, ಮಗ್ರಿಬ್ ಮತ್ತು ಇಶಾ ನಮಾಝ್‌ಗಳನ್ನು ನಿರ್ವಹಿಸಿದರು. ಈ ಸ್ಥಳವು ಖೈಬರ್ ನಿಂದ ಹನ್ನೆರಡು ಮೈಲಿ ದೂರದಲ್ಲಿತ್ತು. ನಮಾಝ್ ಮುಗಿಸಿದ ನಂತರ, ಹಝ್ರತ್ ಪೈಗಂಬರ್(ಸ) ಇಬ್ಬರು ನಾಯಕರನ್ನು ಕರೆದು ತಮ್ಮ ಯುದ್ಧ ಯೋಜನೆಯನ್ನು ತಿಳಿಸುತ್ತಾ ಹೀಗೆ ಹೇಳಿದರು, ನಾನು ಖೈಬರ್ ಮೇಲೆ ದಾಳಿ ಮಾಡಲು ಬಯಸುತ್ತೇನೆ, ಒಂದೆಡೆ ಖೈಬರ್ ಜನರು ಮತ್ತು ಸಿರಿಯಾ ದೇಶದ ನಡುವೆ ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತೇನೆ, ಇದರಿಂದ ಅವರು ಅಲ್ಲಿಂದ ಪಲಾಯನ ಮಾಡಿ ಸಿರಿಯಾ ಕಡೆಗೆ ಹೋಗುವುದಿಲ್ಲ, ಮತ್ತು ಅದರೊಂದಿಗೆ ಈ ಯಹೂದಿಗಳ ಸಹಾಯವನ್ನು ಅವರ ತನಕ ತಲುಪಲು ಸಾಧ್ಯವಾಗದಂತೆ ನಾನು ಬನೂ ಫತ್‌ಫಾನ್‌ರ ಮಧ್ಯೆ ಬರುವೆನು. ಹಸಿಲ್ ಎಂಬ ನಾಯಕ ಸೈನ್ಯದೊಂದಿಗೆ ಸಾಗಲು ಪ್ರಾರಂಭಿಸಿದನು, ಖೈಬರ್ ಕಣಿವೆಗೆ ವಿವಿಧ ಮಾರ್ಗಗಳು ಹೋಗುವ ಸ್ಥಳದಲ್ಲಿ ನಿಂತುಕೊಂಡನು. ಹಝ್ರತ್ ಪೈಗಂಬರ್(ಸ) ಆ ಎಲ್ಲಾ ಮಾರ್ಗಗಳ ಹೆಸರುಗಳನ್ನು ಕೇಳಿದಾಗ ಅವರು ಹಝುನ್, ಶಾಶ್, ಹಾತಿಬ್ ಇತ್ಯಾದಿಗಳು ಎಂದು ಹೆಸರುಗಳನ್ನು ಹೇಳಿದರು, ಅವುಗಳ ಅರ್ಥಗಳ ಪ್ರಕಾರ, ಸಂಕುಚಿತತೆ, ಕಷ್ಟ ಮತ್ತು ದುಃಖವನ್ನು ಸೂಚಿಸುತ್ತದೆ.

ಮತ್ತೊಂದು ಹೆಸರು "ಮರ್ಹಬ್" ಎಂದು ಹೇಳಿದನು, ಇದರರ್ಥ ಮುಕ್ತತೆ ಮತ್ತು ವಿಶಾಲತೆ ಎಂದಾಗಿದೆ. ಆದ್ದರಿಂದ, ಹಝ್ರತ್ ಪೈಗಂಬರ್(ಸ) ದೈವಿಕ ಮಾರ್ಗದರ್ಶನದ ಪ್ರಕಾರ ಶುಭ ಶಕುನವನ್ನು ತೆಗೆದುಕೊಂಡು ಮರ್ಹಬ್ ಎಂಬ ಮಾರ್ಗವನ್ನು ಆರಿಸಿಕೊಂಡರು.

ಹಝ್ರತ್ ಪೈಗಂಬರ್(ಸ) ರವರಿಗೆ, ಬನು ಫತ್‌ಫಾನ್ ಗೋತ್ರದವರು ಖೈಬರ್ ಜನರಿಗೆ ಸಹಾಯ ಮಾಡುವುದಾಗಿ ಭರವಸೆ ನೀಡಿದ್ದಾರೆಂದು ತಿಳಿಸಲಾಯಿತು, ಮತ್ತು ಈಗ ಅವರು ನಾಲ್ಕು ಸಾವಿರ ಜನರ ಹೆಚ್ಚುವರಿ ಸೈನ್ಯದೊಂದಿಗೆ ಹೊರಟರು, ಇಸ್ಲಾಮಿನ ಸೈನ್ಯವು ಖೈಬರ್ ತಲುಪುವ ಮೊದಲು ದಾರಿಯಲ್ಲಿ ದಾಳಿ ಮಾಡಲು ಉದ್ದೇಶಿಸಿದ್ದರು. ಬನು ಫತ್‌ಫಾನ್ ಈಗಾಗಲೇ ತಮ್ಮ ಪ್ರಸಿದ್ಧ ಸೇನಾಧಿಕಾರಿಗಳಾದ ತುಲೈಹಾ ಬಿನ್ ಖುವೈಲಿದ್ ಮತ್ತು ಉಯೈನಾ ಬಿನ್ ಹಿಸ್ನ್ ನೇತೃತ್ವದಲ್ಲಿ ಸುಮಾರು ಒಂದು ಸಾವಿರ ಜನರ ಸೈನ್ಯವನ್ನು ಖೈಬರ್ ಕಡೆಗೆ ಕಳುಹಿಸಿದ್ದರು ಮತ್ತು ಅದು ಖೈಬರ್ ಕೋಟೆಗಳನ್ನು ತಲುಪಿತ್ತು, ಮತ್ತು ಈಗ ನಾಲ್ಕು ಸಾವಿರ ಜನರ ಈ ಸೈನ್ಯವು ಇಸ್ಲಾಮಿನ ಸೈನ್ಯವನ್ನು ತಡೆಯಲು ಮತ್ತು ಅವರ ಅಭಿಪ್ರಾಯದಲ್ಲಿ ಅದನ್ನು ನಿರ್ಮೂಲನೆ ಮಾಡಲು ಹೊರಟಿತ್ತು. ಹಝ್ರತ್ ಪೈಗಂಬರ್(ಸ) ಬನು ಫತ್‌ಫಾನ್ ರನ್ನು ಸಂಪರ್ಕಿಸಿ ಅವರಿಗೆ ಒಂದು ಪತ್ರವನ್ನು ಕಳುಹಿಸಿದರು, ಅದರಲ್ಲಿ ಅವರು ಬನು ಫತ್‌ಫಾನ್ ಗಳು ಖೈಬರ್ ಜೊತೆಗಿನ ಯುದ್ಧದಲ್ಲಿ ತಟಸ್ಥರಾಗಿರಬೇಕು ಮತ್ತು ಇದು ಅಲ್ಲಾಹನು ನನಗೆ ನೀಡಿದ ವಾಗ್ದಾನ ಎಂದು ಬರೆದರು. ಖೈಬರ್ ಮೇಲೆ ನನಗೆ ಜಯ ತಂದುಕೊಡುವುದಾಗಿ ಅವರು ಅವರಿಗೆ ಸ್ಪಷ್ಟಪಡಿಸಿದರು.

ಕೆಲವು ಇತಿಹಾಸಕಾರರ ಪ್ರಕಾರ, ಹಝ್ರತ್ ಪೈಗಂಬರ್(ಸ) ಅವರು ಯಹೂದಿಗಳಿಗೆ ತಮ್ಮ ಬೆಂಬಲವನ್ನು ತ್ಯಜಿಸಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರೆ, ವಿಜಯದ ನಂತರ ಖೈಬರ್ ಅನ್ನು ಈ ಗೋತ್ರಗಳಿಗೆ ನೀಡಲಾಗುವುದು ಎಂಬ ಸಂದೇಶವನ್ನು ಸಹ ರವಾನಿಸಿದ್ದಾರೆ. ಕೆಲವರ ಪ್ರಕಾರ, ಹಝ್ರತ್ ಪೈಗಂಬರ್(ಸ) ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಯಾವುದೇ ಷರತ್ತು ವಿಧಿಸಲಿಲ್ಲ, ಬದಲಿಗೆ ಅವರು ಖೈಬರ್ ಜನರಿಗೆ ಸಹಾಯ ಮಾಡಬಾರದು ಮತ್ತು ಅವರು ತಟಸ್ಥರಾಗಿ ಉಳಿದುಕೊಂಡು ತ್ಯಜಿಸಿದರೆ, ಅವರಿಗೆ ಖೈಬರ್‌ನ ವಾರ್ಷಿಕ ಉತ್ಪನ್ನದ ಅರ್ಧದಷ್ಟು ನೀಡಲಾಗುವುದು ಎಂದು ಹೇಳಿದರು. ಆದಾಗ್ಯೂ, ಅವರು ಹದಿನೈದು ಸಾವಿರ ಯೋಧರ ಸೈನ್ಯವನ್ನು ಹೊಂದಿದ್ದಾರೆ ಮತ್ತು ಸಾವಿರ ಸಾವಿರ ಮುಸ್ಲಿಮರ ವಿರುದ್ಧ ಬಲವಾದ ಕೋಟೆಗಳನ್ನು ಹೊಂದಿದ್ದಾರೆ ಎಂಬ ಹೆಮ್ಮೆಯಿಂದ ತುಂಬಿದ್ದರು, ಅದಕ್ಕಾಗಿಯೇ ಅವರು ಹಝ್ರತ್ ಪೈಗಂಬರ್(ಸ) ಅವರ ಪ್ರಸ್ತಾಪವನ್ನು ಸ್ವೀಕರಿಸಲು ನಿರಾಕರಿಸಿದರು. ಇದಾದ ನಂತರ, ಹಝ್ರತ್ ಪೈಗಂಬರ್(ಸ) ಅವರು ಖಝ್ರುಜ್ ಗೋತ್ರದ ಮುಖ್ಯಸ್ಥ ಮತ್ತು ನಿಷ್ಠಾವಂತ ಸಹಾಬಿಯಾದ ಹಝ್ರತ್ ಸಅದ್ ಬಿನ್ ಉಬಾದ(ರ) ಅವರನ್ನು ಫತ್‌ಫಾನ್ ಸೇನಾಧಿಪತಿಯಾದ ಉಯೈನಾ ಬಿನ್ ಹಿಸನ್ ಬಳಿ ಕಳುಹಿಸಿದರು. ಅವನು ಒಂದು ಸಾವಿರ ಬನು ಫತ್‌ಫಾನ್ ಗೋತ್ರದ ಸೈನ್ಯವನ್ನು ಮುನ್ನಡೆಸುತ್ತಿದ್ದನು ಮತ್ತು ಆ ಸಮಯದಲ್ಲಿ ಖೈಬರ್‌ನಲ್ಲಿರುವ ಯಹೂದಿ ಮುಖ್ಯಸ್ಥ ಮರ್ಹಬ್‌ನ ಕೋಟೆಯಲ್ಲಿದ್ದನು. ಹಝ್ರತ್ ಸಅದ್(ರ.ಅ) ಹಝ್ರತ್ ಪೈಗಂಬರ್(ಸ) ರವರ ಪ್ರತಿನಿಧಿಯಾಗಿ ಬಂದಿದ್ದಾರೆಂದು ಉಯೈನಾ ತಿಳಿದಾಗ, ಅವರನ್ನು ಕೋಟೆಯೊಳಗೆ ಕರೆತರುವ ಉದ್ದೇಶದಿಂದ ಅವನು ಹೋಗಲು ಪ್ರಾರಂಭಿಸಿದನು, ಆದರೆ ಮುಸ್ಲಿಮರ ಈ ಪ್ರತಿನಿಧಿಯನ್ನು ಕೋಟೆಯೊಳಗೆ ಕರೆತರಬಾರದು ಎಂದು ಮರ್ಹಬ್ ಆಕ್ಷೇಪಿಸಿದನು. ಹೀಗೆ ಅವರು ಕೋಟೆಯನ್ನು ಪ್ರವೇಶಿಸುವ ಮಾರ್ಗಗಳು ಅವರಿಗೆ ಕಾಣಿಸಬಹುದು, ಇತ್ಯಾದಿ. ಆದರೆ ಉಯೈನಾ, ಮುಸ್ಲಿಮರ ಪ್ರತಿನಿಧಿಯನ್ನು ಒಳಗೆ ಕರೆತರಲು ಬಯಸಿದ್ದನು ಅವನ ಉದ್ದೇಶ ಮುಸ್ಲಿಮರು ನಮ್ಮ ಶಕ್ತಿ ಮತ್ತು ನಮ್ಮ ಸಿದ್ಧತೆಗಳ ಅತ್ಯುತ್ತಮ ಮಿಲಿಟರಿ ಉಪಕರಣಗಳನ್ನು ನೋಡಬಹುದು ಎಂದು ಭಾವಿಸಿದ್ದನು. ಆದರೆ ಮರ್ಹಬ್ ಅದನ್ನು ಒಪ್ಪದ ಕಾರಣ ಉಯೈನಾ ಹಝ್ರತ್ ಸಅದ್(ರ) ಅವರನ್ನು ಕೋಟೆಯ ಹೊರಗೆ ಭೇಟಿಯಾದನು. ಹಝ್ರತ್ ಸಅದ್(ರ) ಅವರು ಉಯೈನಾ ಅವರನ್ನು ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ತಿಳಿಸಿದರು ಅಂದರೆ: ಸರ್ವಶಕ್ತನಾದ ಅಲ್ಲಾಹನು ನಮಗೆ ಖೈಬರ್ ವಿಜಯದ ವಾಗ್ದಾನ ಮಾಡಿದ್ದಾನೆ ಆದ್ದರಿಂದ ನೀನು ಇಲ್ಲಿಂದ ಹಿಂದಿರುಗಿ ಹೋಗಿ ಹೋರಾಟ ನಿಲ್ಲಿಸು. ಖೈಬರ್ ಅನ್ನು ವಶಪಡಿಸಿಕೊಂಡ ನಂತರ, ಇಡೀ ವರ್ಷದ ಅದರ ಖರ್ಜೂರಗಳನ್ನು ಸಹ ನಿಮಗೆ ನೀಡಲಾಗುವುದು. ಅದಕ್ಕೆ ಉಯೈನಾ ಹಝ್ರತ್ ಸಅದ್(ರ.ಅ) ರವರಿಗೆ ಹೇಳಿದನು, ನಾವು ಯಾವುದೇ ಸಂದರ್ಭದಲ್ಲೂ ನಮ್ಮ ಮಿತ್ರನನ್ನು ಕೈಬಿಡುವುದಿಲ್ಲ, ಮತ್ತು ನೀವು ಎಷ್ಟು ಶಕ್ತಿಶಾಲಿಗಳು ಎಂದು ನಮಗೆ ತಿಳಿದಿದೆ. ಈ ಯಹೂದಿಗಳು ಬಲವಾದ ಕೋಟೆಗಳನ್ನು ಹೊಂದಿದ್ದಾರೆ ಮತ್ತು ಅವರ ಸೈನಿಕರು ಸಹ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಮತ್ತು ಅವರ ಆಯುಧಗಳು ಹೆಚ್ಚು ಹೇರಳವಾಗಿವೆ. ನೀವು ಹೋರಾಡಿದರೆ, ನೀವೆಲ್ಲರೂ ನಾಶವಾಗುತ್ತೀರಿ, ಮತ್ತು ಇವರು ನೀವು ಸೋಲಿಸಿದ ಖುರೈಷಿಗಳು ಮತ್ತು ಇತರರಂತೆ ಜನರಲ್ಲ. ಮತ್ತು ಅದೇ ರೀತಿ ಹೀಗೂ ಹೇಳಿದನು: ನೀವು ನನ್ನ ಈ ಸಂದೇಶವನ್ನು ಮುಹಮ್ಮದ್(ಸ) ಅವರಿಗೆ ತಿಳಿಸಿ. ದುರಹಂಕಾರದ ಪ್ರತಿಕ್ರಿಯೆಗೆ ಹಝ್ರತ್ ಸಅದ್(ರ.ಅ) ಉಯೈನಾಗೆ ಹೇಳಿದರು, ನಾನು ಸಾಕ್ಷ್ಯವಹಿಸುತ್ತೇನೆ, ಹಝ್ರತ್ ಪೈಗಂಬರ್(ಸ) ಖಂಡಿತವಾಗಿಯೂ ನಿನ್ನ ಕೋಟೆಗೆ ಬರುವರು. ಈಗ ನಾವು ನಿನ್ನ ಮುಂದಿರಿಸಿದ ಕಾಣಿಕೆಯನ್ನು ಬೇಡಿಕೊಂಡು ನೀನು ನಮ್ಮ ಬಳಿಗೆ ಬರುವೆ. ಆದರೆ ಆಗ ನಿನಗೆ ಖಡ್ಗವಲ್ಲದೇ ಬೇರೇನೂ ಲಭಿಸದು.

ಎಲೈ ಉಯೈನಾ, ನಾವು ಮದೀನದ ಯಹೂದಿಯರ ಅಂಗಳದಲ್ಲೂ ಪ್ರವೇಶಿಸಿದ್ದನ್ನು ಮತ್ತು ಅವರು ಹೀನಾಯವಾಗಿ ನಾಶವಾಗಿದ್ದನ್ನು ನಾನು ನೋಡಿದ್ದೇನೆ.

ಹೀಗೆ ಹೇಳುತ್ತಾ ಹಝ್ರತ್ ಸಅದ್(ರ.ಅ) ಹಿಂದಿರುಗಿ ಬಂದು ಹಝ್ರತ್ ಪೈಗಂಬರ್(ಸ) ರವರಿಗೆ ಇಡೀ ವಿಷಯವನ್ನು ತಿಳಿಸಿದರು ಮತ್ತು ಅದೇ ಸಮಯದಲ್ಲಿ ಬಹಳ ಪ್ರಾಮಾಣಿಕತೆಯಿಂದ ಹೇಳಿದರು, "ಯಾ ರಸೂಲಲ್ಲಾಹ್(ಸ.ಅ)! ಅಲ್ಲಾಹನು ನಿಮಗೆ ನೀಡಿದ ವಾಗ್ದಾನವನ್ನು ಖಂಡಿತವಾಗಿಯೂ ಪೂರೈಸುತ್ತಾನೆ ಮತ್ತು ಅವನ ಧರ್ಮವನ್ನು ಜಯಿಸುತ್ತಾನೆ." ಈ ಸಮಯದಲ್ಲಿ ಈ ಅನಾಗರೀಕ, ಉಯೈನಾಗೆ ಒಂದೇ ಒಂದು ಖರ್ಜೂರವನ್ನು ಸಹ ನೀಡಬೇಡಿ. ಯಾ ರಸೂಲಲ್ಲಾಹ್(ಸ)! ಕತ್ತಿಗಳು ಅವನ ಮೇಲೆ ತಿರುಗಿದರೆ, ಕಂದಕಗಳ ದಿನದಂದು ಓಡಿಹೋದಂತೆ

ಅವನು ಈ ಯಹೂದಿಗಳನ್ನು ತ್ಯಜಿಸಿ ತನ್ನ ಸ್ವಂತ ಪ್ರದೇಶಕ್ಕೆ ಓಡಿಹೋಗುವನು. ಖಂದಕ್ ಕದನದ ಸಮಯದಲ್ಲಿಯೂ ಸಹ, ಈ ಗೋತ್ರದವರು ಆರು ಸಾವಿರ ಸೈನ್ಯದೊಂದಿಗೆ ಖುರೈಶಿಗಳ ಸಹಾಯಕ್ಕೆ ಬಂದು ನಂತರ ಹಿಂದಿರುಗಿ ಓಡಿಹೋಯಿತು. ದೈವಿಕ ಪ್ರತಾಪ ಮತ್ತು ಗ್ತಫಾನಿಯರ ಪರಾರಿಯ ಪ್ರಸ್ತಾಪ ಸಹ ಲಭಿಸುತ್ತದೆ.

**ನುಸಿರ್‌ತು ಬಿರ್ರುಅ್‌ಬಿ** ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಎಂದರೆ ನನಗೆ ದೈವಿಕ ಪ್ರತಾಪದೊಂದಿಗೆ ನೆರವು ನೀಡಲಾಗಿದೆ. ಈ ಸಂಗತಿ ಮತ್ತೊಂದು ಬಾರಿ ಗ್ತಫಾನಿನ ಸೇನೆಗೆ ಸಂಬಂಧಿಸಿ ಪ್ರಕಟಗೊಂಡಿತು.

ಮದಲು ಹೇಳಿದಂತೆ, ಬನು ಘತ್‌ಫಾನ್‌ನ ನಾಲ್ಕು ಸಾವಿರ ಸೈನ್ಯವು ಇಸ್ಲಾಮಿನ ಸೈನ್ಯವನ್ನು ಹಿಂಬಾಲಿಸುತ್ತಿತ್ತು ಮತ್ತು ಅದು ಖೈಬರ್ ತಲುಪದಂತೆ ತಡೆಯುತ್ತಿತ್ತು, ಆದರೆ ಯಾವುದೋ ದೈವಿಕ ಆಜ್ಞೆಯು ಕಾಣಿಸಿಕೊಂಡಿತು, ಆ ಘತ್‌ಫಾನ್‌ಗಳ ಸೈನ್ಯವು ಇದ್ದಕ್ಕಿದ್ದಂತೆ ಹಿಂದೆ ಸರಿದು ತಮ್ಮ ಮನೆಗಳಿಗೆ ಮರಳಿತು. ಇತಿಹಾಸ ಮತ್ತು ಜೀವನ ಚರಿತ್ರೆಯ ಪುಸ್ತಕಗಳಲ್ಲಿ ಘತ್‌ಫಾನಿಗಳ ಸೇನಾಧಿಪತಿಗೆ ಅವನ ಹಿಂದಿನಿಂದ ಒಂದು ದೊಡ್ಡ ಧ್ವನಿ ಕೇಳಿಬಂತು ಎಂದು ಬರೆಯಲಾಗಿದೆ. ಒಬ್ಬ ಎಚ್ಚರಿಕೆ ನೀಡುವವನು ಅವರಿಗೆ ಕರೆ ಮಾಡಿ, ಮುಸ್ಲಿಂ ಸೇನೆ ಪಡೆಗಳು ಅವರ ಮೇಲೆ ದಾಳಿ ಮಾಡಿವೆ ಎಂದು ಹೇಳುತ್ತಿದ್ದ. ಅವರು ಹಿಂದಿನಿಂದ ಅವರ ಮನೆಗಳನ್ನು ಮತ್ತು ಜಾನುವಾರುಗಳನ್ನು ಲೂಟಿ ಮಾಡಿದ್ದಾರೆ ಮತ್ತು ಅವರ ಸಂಪತ್ತು, ಮಹಿಳೆಯರು ಮತ್ತು ಮಕ್ಕಳನ್ನು ಸೆರೆಹಿಡಿಯಲು ಹೊರಟಿದ್ದಾರೆ. ಇದರಿಂದ ಅವರು ತಕ್ಷಣವೇ ಹಿಂತಿರುಗಿದರು ಮತ್ತು ಉಹೂದಿಗಳಿಗೆ ಸಹಾಯ ಮಾಡಲು ಸಾಧ್ಯವಾಗಲಿಲ್ಲ. ಇದು ಕಾಣದ ಸಹಾಯವಾಗಿತ್ತು. ಅದು ಸರ್ವಶಕ್ತನಾದ ಅಲ್ಲಾಹನ ಧ್ವನಿಯಾಗಿತ್ತು.

(ಸೀರತ್ ಎನ್‌ಸೈಕ್ಲೋಪೀಡಿಯಾ, ಸಂಪುಟ–8, ಪುಟಗಳು 346, 348, ದಾರುಸ್ಸಲಾಮ್) (ಶರ್ಹ್ ಝುರ್ಕಾನಿ, ಸಂಪುಟ–3, ಪುಟ 245, ದಾರುಲ್–ಕುತುಬ್ ಅಲ್–ಇಲ್ಮಿಯಾ, ಬೈರುತ್) (ಫತಹ್ ಖೈಬರ್, ಬಾಶ್ಮಿಲ್, ಪುಟಗಳು–76, 90–91, ನಫೀಸ್ ಅಕಾಡಮಿ ಕರಾಚಿ) (ದಾಎರಾ ಮಾರಿಫ್, ಸೀರತ್ ಮುಹಮ್ಮದ್ ರಸುಲುಲ್ಲಾಹ್(ಸ), ಸಂಪುಟ–8, ಪುಟಗಳು 376, 378 ರಿಂದ 379, ಬಾಜ್ಮ್ ಇಕ್ಬಾಲ್, ಲಾಹೋರ್) (ಸಹೀಹ್ ಅಲ್–ಬುಖಾರಿ, ಕಿಆಬುಲ್ ವಝೂ, ಹದೀಸ್–209) (ಇಮ್ತಾಉಲ್ ಅಸ್ಮಾ, ಸಂಪುಟ–10, ಪುಟ–56, ದಾರುಸ್ಸಲಾಮ್, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಸದುಲ್ ಗ್ವಾಬ, ಸಂಪುಟ–3, ಪುಟ–428, ದಾರುಲ್ ಕುತುಬ್ ಇಲ್ಮಿಯಾ ಬೈರುತ್) (ಕಿತಾಬ್ ಅಲ್–ಮಗಾಝಿ, ಲಿಲ್‌ವಾಕಿದಿ, ಸಂಪುಟ–2, ಪುಟ–135, ಅನುವಾದಕ)

ಘತ್‌ಫಾನ್ ಸೈನ್ಯದ ಗಾತ್ರದ ಬಗ್ಗೆ ಇತಿಹಾಸ ಪುಸ್ತಕಗಳಲ್ಲಿಯೂ ಭಿನ್ನಾಭಿಪ್ರಾಯವಿದೆ. ಈ ಹಿಂದೆ ಒಂದು ಪುಸ್ತಕದಲ್ಲಿ ಉಲ್ಲೇಖಿಸಿದಂತೆ, ಬನು ಘತ್‌ಫಾನ್ ಗೋತ್ರದ ಒಂದು ಸಾವಿರ ಯೋಧರು, ಅವರ ನಾಯಕ ಉಯೈನಾ ಬಿನ್ ಹಿಸ್ನ್ ನೇತೃತ್ವದಲ್ಲಿ, ಖೈಬರ್‌ನ ಯಹೂದಿಗಳ ಕೋಟೆಗಳಿಗೆ ಸಹಾಯ ಮಾಡಲು ಬಂದರು, ಆದರೆ ಜೀವನಚರಿತ್ರೆಯ ಇತರ ಪುಸ್ತಕಗಳು ಅವರ ಸಂಖ್ಯೆ ಒಂದು ಸಾವಿರದ ಬದಲು ನಾಲ್ಕು ಸಾವಿರ ಎಂದು ಹೇಳುತ್ತವೆ.

(ಕಿತಾಬ್ ಅಲ್–ಮಗ್ಹಾಜಿ ವಾಕಿದಿ, ಸಂಪುಟ–2, ಪುಟ–135, ಅನುವಾದಿಸಲಾಗಿದೆ) (ಸೀರತ್ ಎನ್‌ಸೈಕ್ಲೋಪೀಡಿಯಾ, ಸಂಪುಟ–8, ಪುಟ–357, ದಾರುಸ್ಸಲಾಮ್)

ಅದೇ ರೀತಿ, ಕೆಲವು ಜೀವನ ಚರಿತ್ರೆ ಪುಸ್ತಕಗಳು ಉಯೈನಾ ನೇತೃತ್ವದ ಬನು ಘತ್‌ಫಾನ್‌ನಿಂದ ನಾಲ್ಕು ಸಾವಿರ ಜನರ ಸೈನ್ಯವು ಖೈಬರ್ ಕಡೆಗೆ ಹೋಗುತ್ತಿದ್ದಾಗ, ಉಯೈನಾ ಹಝ್ರತ್ ಪೈಗಂಬರ್(ಸ) ರ ನಿಯೋಗದೊಂದಿಗೆ ಸಂಭಾಷಣೆ ನಡೆಸಿದನು ಮತ್ತು ಅಲ್ಲಾಹನ ಭಯದಿಂದಾಗಿ, ನಾಲ್ಕು ಸಾವಿರ ಜನರ ಈ ಗುಂಪು ತಮ್ಮ ಸ್ವಂತ ಪ್ರದೇಶಕ್ಕೆ ಮರಳಿತು ಎಂದು ಹೇಳುತ್ತದೆ.

(ಸೀರತ್ ಇಬ್ನ್ ಹಿಶಾಮ್, ಪುಟ–694, ದಾರುಲ್–ಕುತುಬ್ ಅಲ್–ಇಲ್ಮಿಯಾ, ಬೈರುತ್) (ಶರ್ಹ್ ಅಲ್–ಝುರ್ಖಾನಿ, ಸಂಪುಟ–3, ಪುಟ–252, ದಾರುಲ್ ಕುತುಬ್ ಇಲ್ಮಿಯಾ, ಬೈರುತ್)

ಇಬ್ನ್ ಹಿಶಾಮ್ ಅವರ ಜೀವನ ಚರಿತ್ರೆಯಲ್ಲಿ ಇದನ್ನು ಹೀಗೆ ಬರೆಯಲಾಗಿದೆ.

ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಖೈಬರ್ ಕಡೆಗೆ ತಮ್ಮ ಪ್ರಯಾಣವನ್ನು ಮುಂದುವರೆಸಿದರು, ಮತ್ತು ಸಂಜೆಯ ಕತ್ತಲೆಯಲ್ಲಿ ಖೈಬರ್‌ನ ಕೋಟೆಗಳು ಗೋಚರಿಸಿದಾಗ, ಅವರು ತಮ್ಮ ಸಹಾಬಿಗಳಿಗೆ ಹೇಳಿದರು: "ನಿಲ್ಲಿರಿ." ಆದ್ದರಿಂದ ಅವರೆಲ್ಲರೂ ನಿಂತಾಗ ಹಝ್ರತ್ ಪೈಗಂಬರ್(ಸ)ರು ಹೀಗೆ ಪ್ರಾರ್ಥಿಸಿದರು.

**ಅಲ್ಲಾಹುಮ್ಮ ರಬ್ಬಿಸ್ಸಮಾವಾತಿಸಬ್‌ಅ ವಮಾ ಅಝ್‌ಲಲ್‌ನ ವರಬ್ಬಲ್ ಅರ್ಝೀನಸ್ಸಬ್‌ಅ ವಮಾ ಅಖ್‌ಲಲ್‌ನ ವ ರಬ್ಬಶ್ಶಯಾತೀನ ವಮಾ ಅಝ್‌ಲಲ್‌ನ ವ ರಬ್ಬರ್ರಿಯಾಹ ವಮಾ ಅಝ್‌ರೈನ ಫಇನ್ನಾ ನಸ್‌ಅಲುಕ ಮಿನ್ ಖೈರಿ ಹಾಝಿಹಿಲ್‌ಖರ್ಯತಿ ವ ಖೈರಿ ಅಹ್‌ಲಿಹಾ ವನಊಝುಬಿಕ ಮಿನ್ ಶರ್ರಿಹಾ ವ ಶರ್ರಿಮಾ ಫೀಹಾ ಅಖ್‌ದಿಮೂ ಬಿಸ್ಮಿಲ್ಲಾಹಿ–**

ಅಂದರೆ: ಓ ಏಳು ಆಕಾಶಗಳ ಮತ್ತು ಅವು ಆವರಿಸಿರುವ ಎಲ್ಲದರ ಪ್ರಭುವೇ! ಮತ್ತು ಏಳು ಭೂಮಿಗಳ ಮತ್ತು ಅವು ಹೊತ್ತಿರುವ ಎಲ್ಲದರ ಪ್ರಭುವೇ! ಮತ್ತು ಶೈತಾನರ ಮತ್ತು ಅವು ದಾರಿ ತಪ್ಪಿಸುವವರ ಪ್ರಭುವೇ! ಮತ್ತು ಗಾಳಿಗಳು ಮತ್ತು ಅವು ಬೀಸುವವುಗಳ ಪ್ರಭುವೇ! ಓ ಅಲ್ಲಾಹನೇ! ನಾವು ಈ ಊರಿನ ಮತ್ತು ಇದರ ಜನರ ಒಳಿತನ್ನು ಬೇಡುತ್ತೇವೆ ಮತ್ತು ಈ ಊರಿನ ಮತ್ತು ಇದರ ಜನರ ದುಷ್ಟತನದಿಂದ ನಿನ್ನಲ್ಲಿ ಆಶ್ರಯ ಬೇಡುತ್ತೇವೆ. ಮತ್ತೆ ಹಝ್ರತ್ ಪೈಗಂಬರ್(ಸ) ಹೇಳಿದರು, "ಅಲ್ಲಾಹನ ಹೆಸರಿನಲ್ಲಿ ಮುಂದುವರಿಯಿರಿ."

(ಸಬ್ಲುಲ್ ಹುದಾ ವರ್‌ಶಾದ್, ಸಂಪುಟ–5, ಪುಟ–118, ದಾರುಲ್ ಕುತುಬ್ ಇಲ್ಮಿಯಾ, ಬೈರುತ್)

ನಂತರ ಹಝ್ರತ್ ಪೈಗಂಬರ್(ಸ)ರು ತಮ್ಮ **ಮನ್‌ಝಿಲ** ಕ್ಕೆ ತಲುಪುವವರೆಗೆ ಹೊರಟರು. ಇದು ಖೈಬರ್‌ನ ಮಾರುಕಟ್ಟೆಯಾಗಿತ್ತು. ಯುದ್ಧದ ನಂತರ ಈ ಮಾರುಕಟ್ಟೆ ಹಝ್ರತ್ ಝೈದ್ ಬಿನ್ ಸಾಬಿತ್(ರ.ಅ) ರವರ ಕೈಗೆ ಬಂದಿತು. ಅವರು ರಾತ್ರಿಯ ಸ್ವಲ್ಪ ಸಮಯವನ್ನು ಖೈಬರ್‌ನ ಮಾರುಕಟ್ಟೆ ಸ್ಥಳವಾದ ಮಂಝಿಲಾದಲ್ಲಿ ಕಳೆದರು. ಹಝ್ರತ್ ಪೈಗಂಬರ್(ಸ) ದಾಳಿ ನಡೆಸುವರು ಎಂದು ಯಹೂದಿಯರು ಭಾವಿಸಿರಲಿಲ್ಲ. ಏಕೆಂದರೆ ಅವರಿಗೆ ತಮ್ಮ ಕೋಟೆಗಳ, ಆಯುಧಗಳ ಮತ್ತು ವ್ಯಕ್ತಿಗಳ ಆಧಿಕ್ಯದ ಗರ್ವವಿತ್ತು. ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬರುತ್ತಿದ್ದಾರೆ ಎಂದು ಯಹೂದಿಯರಿಗೆ ಗೊತ್ತಾದಾಗ ಪ್ರತಿದಿನ ಹತ್ತು ಸಾವಿರ ಯೋಧರು ಸಾಲು ಸಾಲಾಗಿ ಹೊರಗೆ ಬರುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು: ನೋಡಿ, ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ನಮ್ಮ ಮೇಲೆ ಸೈನಿಕ ದಾಳಿ ನಡೆಸುವರೇ? ಅದು ಅಸಾಧ್ಯ. ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ತಲುಪಿದಾಗ ಬೆಳಿಗ್ಗೆ ಆಗುವ ವರೆಗೂ ಅವರಿಗೆ ಅದು ಗೊತ್ತಾಗಲಿಲ್ಲ. ಬೆಳಿಗ್ಗೆ ಯಹೂದಿಯರು ತಮ್ಮ ಕೋಟೆಗಳಿಂದ ಹೊರಗೆ ಬಂದರು. ಅವರ ಕೈಗಳಲ್ಲಿ ಕೊಡಲಿ ಮತ್ತು ಬುಟ್ಟಿಗಳು ಇದ್ದುವು. ಅವರು ಹಝ್ರತ್ ಪೈಗಂಬರ್(ಸ)ರನ್ನು ಕಂಡಾಗ ಓಡುತ್ತಾ ತಮ್ಮ ಕೋಟೆಗಳಲ್ಲಿ ಅಡಗಿದರು.

(ಮೂಲ: ಸಬ್ಲುಲ್ ಹುದಾ ವರ್‌ಶಾದ್, ಸಂಪುಟ–5, ಪುಟಗಳು–118, 119, ದಾರುಲ್ ಕುತುಬ್ ಅಲ್–ಇಲ್ಮಿಯಾ, ಬೈರುತ್)

ಹಝ್ರತ್ ಅನಸ್(ರ.ಅ) ವರದಿ ಮಾಡಿದ್ದಾರೆ – ಹಝ್ರತ್ ಪೈಗಂಬರ್(ಸ) ರು ರಾತ್ರಿ ಖೈಬರ್‌ಗೆ ಬಂದರು. ಅವರು(ಸ) ರಾತ್ರಿಯ ಸಮಯದಲ್ಲಿ ಬಂದು ತಲುಪುತ್ತಿದ್ದರೂ ಸಹ ಬೆಳಗಿನ ಜಾವದವರೆಗೆ ಅವರ ಮೇಲೆ ದಾಳಿ ಮಾಡುತ್ತಿರಲಿಲ್ಲ. ಮತ್ತು ಬೆಳಿಗ್ಗೆಯಾದಾಗ, ಯಹೂದಿಯರು ತಮ್ಮ ಗುದ್ದಲಿ ಮತ್ತು ಬುಟ್ಟಿಗಳೊಂದಿಗೆ ಹೊರಗೆ ಹೋದರು. ಅವರು ಆ ಸಮಯಕ್ಕೆ ಬಂದಿದ್ದರು. ಆದಾಗ್ಯೂ, ಹಝ್ರತ್ ಪೈಗಂಬರ್(ಸ)ರು ರಾತ್ರಿಯಲ್ಲಿ ದಾಳಿ ಮಾಡುತ್ತಿರಲಿಲ್ಲ. ಅವರು ಬೆಳಗಿನ ಜಾವ ದಾಳಿ ಮಾಡಬೇಕಿತ್ತು. ಬೆಳಿಗ್ಗೆಯಾದಾಗ, ಯಹೂದಿಯರು ತಮ್ಮ ಗುದ್ದಲಿ ಮತ್ತು ಬುಟ್ಟಿಗಳೊಂದಿಗೆ ಹೊರಗೆ ಹೋದರು. ಅವರು ಹಝ್ರತ್ ಪೈಗಂಬರ್(ಸ)ರನ್ನು ಕಂಡಾಗ ಅವರು ಹೇಳಿದರು: ಮುಹಮ್ಮದ್, ಅಲ್ಲಾಹನಾಣೆ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್), ಮತ್ತು ಸೇನೆ! ಹಝ್ರತ್ ಪೈಗಂಬರ್(ಸ) ಹೇಳಿದರು:

**ಖರಿಬತ್ ಖೈಬರು! ಇನ್ನಾ ಇದಾ ನಝಲ್‌ನಾ ಬಿಸಾಹತಿ ಖೌಮಿನ್ ಫಸಾಅ ಸಬಾಹುಲ್ ಮುಂಧರೀನ್.**

ಎಂದರೆ, ಖೈಬರ್ ನಾಶವಾಯಿತು. ನಾವು ಯಾವುದಾದರೂ ಸಮುದಾಯದ ಅಂಗಣದಲ್ಲಿ ಇಳಿಯುವಾಗ ಮುನ್ನೆಚ್ಚರಿಕೆ ನೀಡಲ್ಪಟ್ಟವರ ಮುಂಜಾನೆ ಕೆಟ್ಟದ್ದಾಗಿರುತ್ತದೆ.

(ಸಹೀಹ್ ಅಲ್–ಬುಖಾರಿ, ಕಿತಾಬುಲ್ ಮಘಾಜಿ, ಖೈಬರ್ ಕದನದ ಅಧ್ಯಾಯ, ಹದೀಸ್ 4197)

**ಮಂಝಿಲಾ**ದಲ್ಲಿ ಶಾಶ್ವತ ಶಿಬಿರ ಇರಲಿಲ್ಲ. ಇಸ್ಲಾಮಿನ ಸೈನ್ಯದ ಶಿಬಿರದಲ್ಲಿ ಬದಲಾವಣೆಯಾಗಿತ್ತು. ಹಝ್ರತ್ ಪೈಗಂಬರ್(ಸ)ರು ಖೈಬರ್ ತಲುಪಿದಾಗ, ಅವರು ಮಂಝಿಲಾದಲ್ಲಿ ರಾತ್ರಿ ಕಳೆದರು ಮತ್ತು ಬೆಳಿಗ್ಗೆ ಅಲ್ಲಿಯೇ ಎಚ್ಚರಗೊಂಡರು ಎಂದು ಉಲ್ಲೇಖಿಸಲಾಗಿದೆ.

ಹಝ್ರತ್ ಹುಬಾಬ್ ಬಿನ್ ಮುಂಝಿರ್(ರ.ಅ) ಹಝ್ರತ್ ಪೈಗಂಬರ್(ಸ) ರವರ ಬಳಿಗೆ ಬಂದು ಹೇಳಿದರು, "ಯಾ ರಸೂಲಲ್ಲಾಹ್(ಸ.ಅ)!! ಈ ಸ್ಥಳದಲ್ಲಿ ಅಂದರೆ ಮಂಝಿಲಾದಲ್ಲಿ ನಿಮ್ಮ

ನಿವಾಸದ ಸ್ಥಾಪನೆಯು ಸರ್ವಶಕ್ತನಾದ ಅಲ್ಲಾಹನ ಆಜ್ಞೆಯ ಮೇರೆಗೆ ಆಗಿದ್ದರೆ, ನಾವು ಏನನ್ನೂ ಹೇಳುವುದಿಲ್ಲ, ಮತ್ತು ನಿಮಗೆ ಅಭಿಪ್ರಾಯವಿದ್ದರೆ, ನಾವು ಸಲಹೆ ನೀಡಲು ಬಯಸುತ್ತೇವೆ." ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಇದು ನನ್ನ ಅಭಿಪ್ರಾಯವಾಗಿದೆ. ಹಝ್ರತ್ ಹುಬಾಬ್ (ರ.ಅ) ಹೇಳಿದರು: ಯಾ ರಸೂಲಲ್ಲಾಹ್(ಸ)! ನೀವು ಅವರ ಕೋಟೆಗಳ ಹತ್ತಿರ ಬಂದಿದ್ದೀರಿ ಮತ್ತು ಅವರ ತೋಟಗಳ ಮುಂದೆ ಇದ್ದೀರಿ, ಮತ್ತು ಭೂಮಿಯು ಉಚ್ಚಧ್ವನಿಯಿಂದ ಕೂಡಿದೆ, ಮತ್ತು ನಾನು ನತಾಹ್ ಜನರನ್ನು ಬಲ್ಲೆ. ಅವರ ಬಾಣಗಳು ಬಹಳ ದೂರ ತಲುಪುತ್ತವೆ ಮತ್ತು ಬಿಲ್ಲುಗಾರಿಕೆಯಲ್ಲಿ ಅವರಿಗೆ ಸಮಾನರು ಯಾರೂ ಇಲ್ಲ. ಮತ್ತು ಅವರು ನಮಗಿಂತ ಮೇಲ್ಮಟ್ಟದ ಸ್ಥಾನದಲ್ಲಿದ್ದಾರೆ. ಅವರ ಬಾಣಗಳು ನಮ್ಮನ್ನು ಬಹಳ ಸುಲಭವಾಗಿ ತಲುಪಬಹುದು, ಮತ್ತು ನಾವು ಅವರ ರಾತ್ರಿಯ ದಾಳಿಯಿಂದಲೂ ಸುರಕ್ಷಿತವಾಗಿಲ್ಲ. ಅವು ತಾಳೆ ಮರಗಳ ಗುಂಪಿನಲ್ಲಿ ಅಡಗಿಕೊಳ್ಳಬಹುದು. ಆದ್ದರಿಂದ, ನೀವು(ಸ.ಅ.) ಇಲ್ಲಿಂದ ಬೇರೆ ಸ್ಥಳಕ್ಕೆ ಸ್ಥಳಾಂತರಿಸಬೇಕೆಂದು ನಾನು ವಿನಂತಿಸುತ್ತೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ)ರು ಹೇಳಿದರು: ನೀವು ಒಳ್ಳೆಯ ಅಭಿಪ್ರಾಯ ನೀಡಿದ್ದೀರಿ, ಆದರೆ ನಾವು ಇಂದು ಅವರೊಂದಿಗೆ ಹೋರಾಡುತ್ತೇವೆ. ಆದರೆ ಅದೇ ಸಮಯದಲ್ಲಿ, ಹಝ್ರತ್ ಪೈಗಂಬರ್(ಸ)ರು ತಮ್ಮ ಭದ್ರತಾ ಪಡೆಯ ಉಸ್ತುವಾರಿ ವಹಿಸಿದ್ದ ಮುಹಮ್ಮದ್ ಬಿನ್ ಮಸ್ಲಾಮಾ(ರ) ಅವರನ್ನು ಕರೆದು ಹೇಳಿದರು: ಅವರ ಕೋಟೆಗಳಿಂದ ಸ್ವಲ್ಪ ದೂರದಲ್ಲಿ ನಮಗಾಗಿ ಒಂದು ಸ್ಥಳವನ್ನು ಹುಡುಕಿ. ಮುಹಮ್ಮದ್ ಬಿನ್ ಮಸ್ಲಮಾ(ರ) ಖೈಬರ್ ಮತ್ತು ಘತ್ಫಾನ್ ಗೋತ್ರದ ನಡುವೆ ಇರುವ ರಜೀ ಎಂಬ ಸ್ಥಳವನ್ನು ತಲುಪುವವರೆಗೆ ನಡೆದರು. ನಂತರ ಅವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹಿಂತಿರುಗಿ ಹೇಳಿದರು: "ಯಾ ರಸೂಲಲ್ಲಾಹ್(ಸ)! ನಾನು ನಿಮಗಾಗಿ ಒಂದು ಸ್ಥಳವನ್ನು ಕಂಡುಕೊಂಡಿದ್ದೇನೆ. ಅವರು ಹೇಳಿದರು: "ಸರ್ವಶಕ್ತನಾದ ಅಲ್ಲಾಹನ ಅನುಗ್ರಹದೊಂದಿಗೆ ಹೋಗಿ. ಆದರೆ ಅದಕ್ಕೂ ಮೊದಲು, ಹಝ್ರತ್ ಪೈಗಂಬರ್(ಸ) ಇಂದು ಈ ಸ್ಥಳದಿಂದಲೇ ಯುದ್ಧ ನಡೆಯಲಿದೆ ಎಂದು ಹೇಳಿದ್ದರು. ಆದ್ದರಿಂದ, ಸಂಜೆ ಯುದ್ಧ ಮುಗಿದ ನಂತರ, ಇಡೀ ಇಸ್ಲಾಮಿನ ಸೈನ್ಯವು ಈ ಹೊಸ ಸ್ಥಳಕ್ಕೆ ಸ್ಥಳಾಂತರಗೊಂಡಿತು.

(ಇಮ್ತಾ' ಅಲ್-ಇಸ್ಮಾ', ಸಂಪುಟ-9, ಪುಟ-231, ದಾರುಲ್ ಕುತುಬ್ ಇಲ್ಮಿಯಾ ಬೈರುತ್) (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-5, ಪುಟ-119, ದಾರುಲ್-ಕುತುಬ್ ಇಲ್ಮಿಯಾ, ಬೈರುತ್) (ಸಬ್ಲುಲ್ಹುದಾ ವರ್‍ರಶಾದ್ (ಅನುವಾದ) ಸಂಪುಟ-5, ಪುಟ-130, ಝುವಿಯಾಹ್ ಪಬ್ಲಿಷರ್ಸ್, ಲಾಹೋರ್) (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶಾಮ್, ಪುಟ-694, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಖೈಬರ್‌ನ ವಿವಿಧ ಕೋಟೆಗಳ ವಿಭಜನೆಯನ್ನು ಸಹ ಉಲ್ಲೇಖಿಸುವುದು ಅವಶ್ಯಕ, ಏಕೆಂದರೆ ಈ ಯುದ್ಧವು ಒಂದರ ನಂತರ ಒಂದರಂತೆ ವಶಪಡಿಸಿಕೊಳ್ಳಲಾದ ಕೋಟೆಗಳಿಗೆ ಸಂಬಂಧಿಸಿದೆ. ಈ ಕೋಟೆಗಳ ಸಂಖ್ಯೆಯಲ್ಲಿ ಮಾತ್ರವಲ್ಲ, ಅವುಗಳ ಹೆಸರುಗಳಲ್ಲಿಯೂ ಭಿನ್ನಭಿಪ್ರಾಯವಿದೆ. ಅಲ್ಲದೆ, ಈ ಯುದ್ಧದ ಘಟನೆಗಳನ್ನು ಕೆಲವು ಪುಸ್ತಕಗಳಲ್ಲಿ ಕೆಲವು ಕೋಟೆಗಳಿಗೆ ಕಾರಣವೆಂದು ಹೇಳಲಾಗಿದೆ, ಆದರೆ ಇತರ ಪುಸ್ತಕಗಳಲ್ಲಿ ಈ ಘಟನೆಗಳನ್ನು ಇತರ ಕೋಟೆಗಳಿಗೆ ಕಾರಣವೆಂದು ಹೇಳಲಾಗಿದೆ. ಖೈಬರ್‌ನ ಭೌಗೋಳಿಕ ವಿತರಣೆಗೆ ಸಂಬಂಧಿಸಿದಂತೆ, ಅದರ ಕೋಟೆಗಳನ್ನು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ:

ಯಾಖೂಬಿ ಇತಿಹಾಸದಲ್ಲಿ, ಖೈಬರ್‌ನ ಕೋಟೆಗಳ ಸಂಖ್ಯೆಯನ್ನು ಆರು ಎಂದು ಉಲ್ಲೇಖಿಸಲಾಗಿದೆ ಮತ್ತು ಅವುಗಳಲ್ಲಿ ನಯಿಮ್ ಕೋಟೆ ಬಗ್ಗೆ ಯಾವುದೇ ಉಲ್ಲೇಖವಿಲ್ಲ, ಆದರೆ ಹೆಚ್ಚಿನ ಜೀವನಚರಿತ್ರೆ ಪುಸ್ತಕಗಳು ಖೈಬರ್ ಕದನದ ಆರಂಭವು ಈ ಕೋಟೆಯಿಂದ, ಅಂದರೆ ನಯಿಮ್ ಕೋಟೆಯಿಂದ ಪ್ರಾರಂಭವಾಯಿತು ಎಂದು ಹೇಳುತ್ತವೆ. ಝುರ್ಖಾನಿಯಲ್ಲಿರುವ ಕೋಟೆಗಳ ಸಂಖ್ಯೆ ಹತ್ತು ಎಂದು ಹೇಳಲಾಗಿದೆ. ಈ ಎಲ್ಲಾ ಪುಸ್ತಕಗಳನ್ನು ನೋಡಿದಾಗ, ಖೈಬರಿನ ಪ್ರದೇಶ ನಿತಾಹ್, ಶಿಖ್ ಮತ್ತು ಕತೀಬ ಎಂಬೀ ಮೂರು ಭಾಗಗಳಲ್ಲಿ ವಿಂಗಡಿಸಲಾಗಿತ್ತು. ಇವುಗಳಲ್ಲಿ ಎಂಟು ಕೋಟೆಗಳು ಈ ಕೆಳಗಿನ ವಿಂಗಡಣೆ ಪ್ರಕಾರವಾಗಿದ್ದುವು. ನತಾಹ್‌ನಲ್ಲಿ ಮೂರು ಕೋಟೆಗಳಾದ ನಾಯಿಮ್, ಸುಅ್‌ಬ್ ಮತ್ತು ಝುಬೀರ್. ಈ ಕೋಟೆಯ ಹೆಸರು ಕುಲ್ಲಾ. ನಂತರ ಅದು ಹಝ್ರತ್ ಝುಬೈರ್ ಬಿನ್ ಅವಾಮ್(ರ) ಅವರ ನಿಯಂತ್ರಣಕ್ಕೆ ಬಂದಿತು. ಆದ್ದರಿಂದ, ಅದರ ಹೆಸರು ಕಿಲಾ ಝುಬೈರ್ ಎಂದು ಪ್ರಸಿದ್ಧವಾಯಿತು. ಶಿಖ್‌ನಲ್ಲಿ ಉಬೈ ಮತ್ತು ಬರೀ ಎಂಬ ಎರಡು ಕೋಟೆಗಳಿದ್ದವು, ಅಥವಾ ಕೆಲವರು ಇದನ್ನು ನಝಾರ್ ಎಂದು ಬಣ್ಣಿಸಿದ್ದಾರೆ, ಮತ್ತು ಕತೀಬಾದಲ್ಲಿ ಮೂರು ಕೋಟೆಗಳಿದ್ದವು, ಅವುಗಳೆಂದರೆ ಖಮೂಸ್, ವಾತೀಹ್ ಮತ್ತು ಸುಲೈಮ್.

(ಶರ್ಹ್ ಅಲ್-ಉಲಾಮಾ ಅಲ್-ಝುರ್ಕಾನಿ, ಸಂಪುಟ-3, ಪುಟಗಳು 264-266, ದಾರು ಕುತುಬ್ ಇಲ್ಮಿಯಾ, ಬೈರುತ್) (ಫಜ್ವತುನ್ನಬಿ(ಸ), ಅಬುಲ್ ಕಲಾಂ ಆಜಾದ್, ಪುಟಗಳು 162-163) (ತಬಕಾತ್ ಇಬ್ನೆ ಸಅದ್, ಸಂಪುಟ-2, ಪುಟ-81, ದಾರುಲ್ ಕುತುಬ್ ಇಲ್ಮಿಯಾ, ಬೈರುತ್)

ಯುದ್ಧದ ವಿವರಣೆ ಹೀಗಿದೆ. ಯುದ್ಧ ಆರಂಭವಾಗುವುದಕ್ಕೆ ಮುಂಚಿತವಾಗಿ ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ಸಂಬೋಧಿಸಿ ಸಂಕ್ಷಿಪ್ತವಾದ ಭಾಷಣವನ್ನು ಮಾಡುತ್ತಾ ಹೇಳಿದರು:

ಶತ್ರುಗಳೊಡನೆ ಮುಖಾಮುಖಿಯಾಗಲು ಬಯಸಬೇಡಿರಿ. ಅಲ್ಲಾಹನಲ್ಲಿ ಸಂರಕ್ಷಣೆಯನ್ನು ಯಾಚಿಸಿರಿ. ನಿಮ್ಮನ್ನು ಯಾವ ಪರೀಕ್ಷಣೆಗೆ ಹಾಕಲಾಗುವುದು ಎಂದು ನಿಮಗೆ ಗೊತ್ತಿಲ್ಲ. ನೀವು ಶತ್ರುಗಳ ಮುಂದೆ ಬರುವಾಗ ಹೀಗೆ ದುಆ ಮಾಡಿರಿ:

**ಅಲ್ಲಾಹುಮ್ಮ ಅನ್ತ ರಬ್ಬಿ ವ ರಬ್ಬುಹುಮ್ ವನವಾಸೀನಾ ನವಾಸೀಹುಮ್ ಬಿಯದಿಕ ವ ಇನ್ನಮಾ ತಖ್ತುಲುಹುಮ್ ಅನ್ತ**

ಹೇ ಅಲ್ಲಾಹ್, ನೀನು ನಮ್ಮ ಮತ್ತು ಅವರ ಪರಿಪಾಲಕನಾಗಿರುವೆ. ಅವರ ಭವಿಷ್ಯ ಮತ್ತು ನಮ್ಮ ಭವಿಷ್ಯ ನಿನ್ನ ಕೈಯಲ್ಲಿವೆ. ನೀನೇ ಅವರನ್ನು ವಧಿಸುವೆ. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-5, ಪುಟ-119-120, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ನಂತರ, ಹಝ್ರತ್ ಪೈಗಂಬರ್(ಸ) ಯುದ್ಧಕ್ಕೆ ಆದೇಶಿಸಿದರು ಮತ್ತು ತಮ್ಮ ಸಹಾಬರಿಗೆ ತಾಳ್ಮೆಯಿಂದಿರಲು ಪ್ರೋತ್ಸಾಹಿಸಿದರು. ಮೊದಲು ನಾಯಿಮ್ ಕೋಟೆಯನ್ನು ಮುತ್ತಿಗೆ ಹಾಕಿದರು. ನಾಯಿಮ್ ಎಂಬ ಕೋಟೆ ಯಹೂದಿಯರ ಅತ್ಯಂತ ಸುದೃಢವಾದ ಕೋಟೆಯಾಗಿತ್ತು. ಹಝ್ರತ್ ಪೈಗಂಬರ್(ಸ)ರು ಆ ದಿನ ತೀವ್ರವಾಗಿ ಹೋರಾಡಿದರು, ಮತ್ತು ನಿತಾಹ್‌ದ ಜನರು ಅವರೊಂದಿಗೆ ತೀವ್ರವಾಗಿ ಹೋರಾಡಿದರು, ಮತ್ತು ಸಹಚರರು ಆ ದಿನ ಅವರನ್ನು ರಕ್ಷಿಸಿದರು. ಹಝ್ರತ್ ಪೈಗಂಬರ್(ಸ)ರು ಎರಡು ರಕ್ಷಾಕವಚ ಮತ್ತು ಶಿರಸ್ತ್ರಾಣವನ್ನು ಧರಿಸಿ ಓಡುತ್ತಿರುವ ಕುದುರೆಯ ಮೇಲೆ ಸವಾರಿ ಮಾಡುತ್ತಿದ್ದರು. ಅವರ ಕುದುರೆಯ ಹೆಸರು ಝರಿಬ್ ಎಂದಾಗಿತ್ತು, ಮತ್ತು ಅವರ ಕೈಯಲ್ಲಿ ಒಂದು ಈಟಿ ಮತ್ತು ಒಂದು ಗುರಾಣಿ ಇತ್ತು. ಶತ್ರುಗಳು ಬಾಣಗಳ ಮಳೆ ಸುರಿಸುತ್ತಲೇ ಇದ್ದರು, ಆದರೆ ಮುಸ್ಲಿಮರು ಕಡಿಮೆ ಬಾಣಗಳಿದ್ದ ಕಾರಣ ಎಚ್ಚರಿಕೆಯಿಂದ ಭಾಣಗಳನ್ನು ಬೀಸುತ್ತಿದ್ದರು. ವಾಸ್ತವವಾಗಿ, ಅವರು ಯಹೂದಿಯರ ಬಿದ್ದ ಬಾಣಗಳನ್ನು ಎತ್ತಿಕೊಂಡು ಅವರ ಮೇಲೆ ಬೀಸುತ್ತಿದ್ದರು.

ಈ ಯುದ್ಧದಲ್ಲಿ ಹಝ್ರತ್ ಮಹ್ಮೂದ್ ಬಿನ್ ಮಸ್ಲಮಾ(ರ.ಅ) ಅವರ ಹುತಾತ್ಮತೆಯ ಬಗ್ಗೆಯೂ ಉಲ್ಲೇಖವಿದೆ. ಹಝ್ರತ್ ಮಹ್ಮೂದ್ ಬಿನ್ ಮಸ್ಲಮಾ(ರ.ಅ) ಸ್ವಲ್ಪ ದಣಿದಿದ್ದರು ಮತ್ತು ಅವರ ಆಯುಧಗಳು ಭಾರವಾಗಲು ಪ್ರಾರಂಭಿಸಿದವು ಮತ್ತು ಶಾಖವು ತುಂಬ ಇದ್ದಿದ್ದರಿಂದ ಅವರು ನಾಯಿಮ್ ಕೋಟೆಯ ಗೋಡೆಯ ನೆರಳಿನಲ್ಲಿ ಕುಳಿತರು. ಯಹೂದಿ ಮುಖ್ಯಸ್ಥ ಮರ್ಹಬ್ ಅವರನ್ನು ನೋಡಿ ಅವರ ಮೇಲೆ ಬೀಸುವ ಕಲ್ಲನ್ನು ಎಸೆದನೆಂದು ಹೇಳಲಾಗುತ್ತದೆ. ಕಿನಾನಾ ಬಿನ್ ರಬಿ' ಬಿದ್ದು ಮೇಲಿನಿಂದ ಎಸೆದಿದ್ದನು ಎಂದು ಸಹ ಹೇಳಲಾಗುತ್ತದೆ. ಆ ಬೀಸುವ ಕಲ್ಲು ಅವರ ತಲೆಗೆ ಬಡಿದು ಅದನ್ನು ಹರಿದು ಹಾಕಿತು, ಇದರಿಂದಾಗಿ ಅವರ ನೆತ್ತಿಯ ಚರ್ಮ ಕತ್ತರಿಸಿ ಅವರ ಮುಖದ ಮೇಲೆ ಬಿದ್ದಿತು. ಅವರನ್ನು ಹಝ್ರತ್ ಪೈಗಂಬರ್(ಸ)ರ ಬಳಿಗೆ ತರಲಾಯಿತು. ಅವರು ಚರ್ಮವನ್ನು ಮತ್ತೆ ಅದರ ಸ್ಥಳದಲ್ಲಿ ಇರಿಸಿ ಬಟ್ಟೆಯಿಂದ ಬ್ಯಾಂಡೇಜ್ ಮಾಡಿದರು, ಆದರೆ ಗಾಯವು ತುಂಬಾ ತೀವ್ರವಾಗಿದ್ದರಿಂದ ಹಝ್ರತ್ ಮಹಮೂದ್ ಬಿನ್ ಮಸ್ಲಮಾ(ರ.ಅ) ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ಕೆಲವು ದಿನಗಳ ನಂತರ ನಿಧನರಾದರು. ಹಝ್ರತ್ ಮಹಮೂದ್ (ರ.ಅ) ಗಾಯಗೊಂಡಾಗ, ಹಝ್ರತ್ ಪೈಗಂಬರ್(ಸ) ಅವರ ಸಹೋದರ ಹಝ್ರತ್ ಮುಹಮ್ಮದ್ ಬಿನ್ ಮಸ್ಲಮಾ(ರ.ಅ) ಅವರನ್ನು ಸಮಾಧಾನಪಡಿಸಿದರು ಮತ್ತು ಹೇಳಿದರು, "ನಿಮ್ಮ ಸಹೋದರನ ಹಂತಕ ಶೀಘ್ರದಲ್ಲೇ ತನ್ನ ಅಂತ್ಯವನ್ನು ಎದುರಿಸುತ್ತಾನೆ."

ಆ ಮೊದಲ ದಿನ ಮುಸ್ಲಿಮರು ತುಂಬಾ ಕಷ್ಟಗಳನ್ನು ಅನುಭವಿಸಿದರು. ಕೋಟೆಗಳಿಂದ ಬಂದ ಬಿಲ್ಲುಗಾರಿಕೆಯಿಂದ ಐವತ್ತು ಮುಸ್ಲಿಮರು ಗಾಯಗೊಂಡರು. ಸಂಜೆಯಾದಾಗ, ಹಝ್ರತ್ ಪೈಗಂಬರ್(ಸ)ರು ರಜೀ' ಕಡೆಗೆ ಹೋಗಿ ಜನರನ್ನು ಸಹ ಬರಲು ಆದೇಶಿಸಿದರು. ಹಝ್ರತ್ ಹುಬಾಬ್(ರ.ಅ) ರವರ ಸಲಹೆಯ ಮೇರೆಗೆ ಆಯ್ಕೆ ಮಾಡಲಾದ ಸ್ಥಳ ಇದಾಗಿತ್ತು, ಮತ್ತು ಈಗ ಈ ಸ್ಥಳವು ಮುಸ್ಲಿಮರ ಕೇಂದ್ರ ಸ್ಥಳವಾಗಿತ್ತು. ಮೊದಲು ಹೇಳಿದಂತೆ, ಈ ಕೋಟೆಯು ಯಹೂದಿಗಳ ಅತ್ಯಂತ ಬಲಿಷ್ಠ ಕೋಟೆಯಾಗಿತ್ತು ಮತ್ತು ಖೈಬರ್‌ನ ಅತ್ಯಂತ ಧೈರ್ಯಶಾಲಿ ಮತ್ತು ಅತ್ಯಂತ ಪ್ರಸಿದ್ಧ ಯೋಧ ಮರ್ಹಬ್ ಈ ಕೋಟೆಯ ರಕ್ಷಣೆಯನ್ನು ಮುನ್ನಡೆಸುತ್ತಿದ್ದನು ಮತ್ತು ಅವನಿಗೆ ಈ ಕೆಳಗಿನಂತಹ ವ್ಯಕ್ತಿಗಳು ಸಹಾಯ

ಮಾಡಿದರು: ಅವನಿಗಿಂತ ಕಡಿಮೆಯಿಲ್ಲದ ಧೈರ್ಯಶಾಲಿಗಳು ಮತ್ತು ಧೈರ್ಯಶಾಲಿಗಳು ಅವನ ಇಬ್ಬರು ಸಹೋದರರಾದ ಯಾಸಿರ್ ಮತ್ತು ಹ್ಯಾರಿಸ್ ಆಗಿದ್ದರು. ಹಝ್ರತ್ ಪೈಗಂಬರ್(ಸ)ರು ಹತ್ತು ದಿನಗಳ ಕಾಲ ನಿರಂತರವಾಗಿ ಹೋರಾಡಿದರು ಎಂದು ವರದಿಗಳು ಸೂಚಿಸುತ್ತವೆ. ಅವರು ಹಝ್ರತ್ ಮುಹಮ್ಮದ್ ಬಿನ್ ಮಸ್ಲಮಾ(ರ.ಅ) ಅವರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಿ ಹಝ್ರತ್ ಉಸ್ಮಾನ್(ರ.ಅ) ಅವರನ್ನು ಶಿಬಿರದ ಉಸ್ತುವಾರಿ ವಹಿಸಿಕೊಳ್ಳುತ್ತಿದ್ದರು. ಸಂಜೆಯಾದಾಗ, ನೀವು ಅದೇ ಸ್ಥಳಕ್ಕೆ ಹಿಂತಿರುಗುತ್ತಿದ್ದರು ಮತ್ತು ಗಾಯಗೊಂಡ ಮುಸ್ಲಿಮರನ್ನು ಸಹ ಅಲ್ಲಿಗೆ ಕರೆತರಲಾಗುತ್ತಿತ್ತು. ಅವರ ಗಾಯಗಳಿಗೆ ಅಲ್ಲಿ ಬ್ಯಾಂಡೇಜ್ ಹಾಕಲಾಗಿತ್ತು.

(ಸೀರತ್ ಅಲ್-ಹಲಾಬಿಯಾಹ್, ಸಂಪುಟ-3, ಪುಟಗಳು-50-51, ದಾರುಲ್ ಕುತುಬ್ ಇಲ್ಮಿಯಾ, ಬೈರುತ್) (ಕಿತಾಬುಲ್ ಮಗ್ಹಾಝಿ, ಸಂಪುಟ-2, ಪುಟಗಳು-121, ದಾರುಲ್ ಕುತುಬ್ ಇಲ್ಮಿಯಾ, ಬೈರುತ್) (ಸೀರತ್ ಎನ್‌ಸೈಕ್ಲೋಪೀಡಿಯಾ, ಸಂಪುಟ-6, ಪುಟ-361, ದಾರುಸ್ಸಲಾಮ್) (ದಾಏರಾ ಮಾರಿಫ್ ಮುಹಮ್ಮದ್ ರಸುಲುಲ್ಲಾಹ್(ಸ), ಸಂಪುಟ-8, ಪುಟ-388, 390, ಬಾಜ್ಮ್ ಇಕ್ಬಾಲ್, ಲಾಹೋರ್) (ಫರ್ಹಾಂಗ್ ಸೀರತ್, ಪುಟ-183, ಝುವಾರಾ ಅಕಾಡಮಿ ಕರಾಚಿ)

ಈ ಯುದ್ಧದ ಘಟನೆಗಳಲ್ಲಿ, ಮರ್ಹಬ್ ಯುದ್ಧ ಮತ್ತು ಆಮಿರ್ ಇಬ್ನ್ ಅಕ್ವಾ(ರ) ರ ಹುತಾತ್ಮತೆಯ ಉಲ್ಲೇಖವೂ ಇದೆ. ಅದರ ವಿವರಣೆ ಹೀಗಿದೆ: ಆ ದಿನಗಳಲ್ಲಿ ಒಂದು ದಿನ, ಧೈರ್ಯ ಮತ್ತು ಶೌರ್ಯದಲ್ಲಿ ಯಾರಿಗೂ ಕಡಿಮೆಯಿಲ್ಲದ ಕೋಟೆಯ ಯಹೂದಿ ಸೇನಾಧಿಪತಿ ಕೋಟೆಯಿಂದ ಹೊರಬಂದು ಮುಸ್ಲಿಮರಿಗೆ ಸವಾಲು ಹಾಕಲು ಪ್ರಾರಂಭಿಸಿದನು. ಅವನು ಹೆಮ್ಮೆಯಿಂದ ಮತ್ತು ದುರಹಂಕಾರದಿಂದ ತನ್ನ ಕತ್ತಿಯನ್ನು ಝಳಪಿಸಿ ಈ ಕವಿತೆಯನ್ನು ಹೇಳಲು ಪ್ರಾರಂಭಿಸಿದನು:

**ಖದ್ ಅಲಿಮತ್ ಖೈಬರು ಅನ್ನೀ ಮರ್ಹಬು**
**ಶಾಕಿಸ್ಸಲಾಹಿ ಬತಲುಲ್ ಮುಜರ್‍ರಬು**
**ಇಝಲ್ ಹುರೂಬು ಅಖ್ಬಲತ್ ತುಲಹ್ಹಬು**

ಖೈಬರ್‌ಗೆ ನಾನು ಮರ್ಹಬ್ ಎಂದು ತಿಳಿದಿದೆ. ನಾನು ಯೋಧ, ಧೈರ್ಯಶಾಲಿ ಮತ್ತು ಯುದ್ಧದ ಅಪಾಯಗಳನ್ನು ಎದುರಿಸುವ ನಿರ್ಭೀತ ಎಂದು ತಿಳಿದಿದೆ.

ಮರ್ಹಬ್‌ನ ಈ ಸವಾಲನ್ನು ಆಲಿಸಿ ಹಝ್ರತ್ ಆಮಿರ್ ಬಿನ್ ಅಕ್ವಾ(ರ) ಸೈನ್ಯದಿಂದ ಹೊರಬಂದು ಹೀಗೆ ಹೇಳಿದರು:

**ಖದ್ ಅಲಿಮತ್ ಖೈಬರು ಇನ್ನೀ ಆಮಿರುನ್**
**ಶಾಕಿಸ್ಸಲಾಹಿ ಬತಲುಲ್ ಮುಗ್ಹಾಮಿರು**

ಖೈಬರ್‌ನ ಇಡೀ ಜನರು ಕೂಡ ನಾನು ಆಮಿರ್, ಶಸ್ತ್ರಸಜ್ಜಿತ, ಧೈರ್ಯಶಾಲಿ ಮತ್ತು ಯುದ್ಧದ ಅಪಾಯಗಳನ್ನು ಎದುರಿಸುವ ನಿರ್ಭೀತ ಎಂದು ತಿಳಿದಿರುತ್ತದೆ.

ಅದಾದ ನಂತರ, ಇಬ್ಬರೂ ಮುಖಾಮುಖಿಯಾಗಿ ನಿಂತು ಒಬ್ಬರನ್ನೊಬ್ಬರು ಇರಿದುಕೊಳ್ಳಲು ಪ್ರಾರಂಭಿಸಿದರು. ಮರ್ಹಬ್ ತನ್ನ ಕತ್ತಿಯಿಂದ ಹೊಡೆದನು, ಅದನ್ನು ಹಝ್ರತ್ ಆಮಿರ್(ರ) ತನ್ನ ಗುರಾಣಿಯಿಂದ ತಡೆದರು ಮತ್ತು ತಕ್ಷಣ ಕೆಳಗೆ ಬಾಗಿ ಕೆಳಗಿನಿಂದ ಅವನನ್ನು ಹೊಡೆದರು, ಆದರೆ ಅವನ ಕತ್ತಿ ಚಿಕ್ಕದಾಗಿತ್ತು, ಆದ್ದರಿಂದ ಅವನನ್ನು ಹೊಡೆಯುವ ಬದಲು, ಹಝ್ರತ್ ಆಮಿರ್(ರ) ಅವನ ಸ್ವಂತ ಕತ್ತಿಯಿಂದ ಹೊಡೆದರು, ಅದು ಅವನಿಗೆ ಆಳವಾದ ಗಾಯವನ್ನುಂಟುಮಾಡಿತು ಮತ್ತು ಅವನ ಹುತಾತ್ಮತೆಗೆ ಕಾರಣವಾಯಿತು. ಇವರು ಈ ಯುದ್ಧದ ಎರಡನೇ ಹುತಾತ್ಮರು. ಇಬ್ಬರನ್ನೂ ಒಂದೇ ಖಬರ್‌ನಲ್ಲಿ, ಅಂದರೆ ರಜೀ ಸ್ಥಳದಲ್ಲಿ ದಫನ್ ಮಾಡಲಾಯಿತು.

(ದಾಏರಾ ಮಾರಿಫ್ ಸೀರತ್ ಮುಹಮ್ಮದ್ ರಸುಲುಲ್ಲಾಹ್(ಸ), ಸಂಪುಟ-8, ಪುಟಗಳು 388-389, ಬಜ್ಮ್ ಇಕ್ಬಾಲ್ ಲಾಹೋರ್)

ಹಝ್ರತ್ ಸಲಮಾ ಬಿನ್ ಅಕ್ವಾ(ರ.ಅ) ಹೇಳುತ್ತಾರೆ, ನನ್ನ ಚಿಕ್ಕಪ್ಪ ಹಝ್ರತ್ ಆಮಿರ್ ಬಿನ್ ಅಕ್ವಾ(ರ.ಅ) ಅವರು ತಮ್ಮ ಕೈಯಿಂದಲೇ ಹುತಾತ್ಮರಾದಾಗ, ಕೆಲವು ಸಹಾಬಗಳು ಆಮಿರ್ ಅವರ ಕರ್ಮಗಳು ವ್ಯರ್ಥವಾದವು ಎಂದು ಹೇಳಲು ಪ್ರಾರಂಭಿಸಿದರು. ಆದ್ದರಿಂದ, ಹಝ್ರತ್ ಸಲಮಾ(ರ.ಅ) ಹೇಳುತ್ತಾರೆ, ಇದರ ನಂತರ ನಾನು ಅಳುತ್ತಾ ಹಝ್ರತ್ ಪೈಗಂಬರ್(ಸ) ರವರ ಬಳಿಗೆ ಬಂದು ಹೇಳಿದೆ ಯಾ ರಸೂಲಲ್ಲಾಹ್(ಸ), ಆಮಿರ್ ಅವರ ಕರ್ಮಗಳು ವ್ಯರ್ಥವಾಗಿವೆಯೇ? ಅದಕ್ಕೆ ಹಝ್ರತ್ ಪೈಗಂಬರ್(ಸ)ರು ಹೇಳಿದರು: ಇದನ್ನು ಯಾರು ಹೇಳಿದರು? ಅವರು ಹೇಳುತ್ತಾರೆ, "ನಾನು ಹೇಳಿದೆ, 'ನಿಮ್ಮ ಕೆಲವು ಸಹಾಬಗಳು ಇದನ್ನು ಹೇಳಿದರು." ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: **ಕಝಬ ಮನ್ ಖಾಲಹೂ, ಇನ್ನ ಲಹೂ ಅಲಜ್ರೈನಿ- ವ ಜಮಅ ಬೈನ ಇಸ್‌ಬಅತಿಹಿ- ಇನ್ನಹೂ ಲಜಾಹಿದುನ್ ಮುಜಾಹಿದುನ್, ಖಲ್ಲ ಅರಬಿಯ್ಯುನ್ ಮಶಾಬಿಹಾ ಮಿಸ್ಲಹೂ-** ಅಂದರೆ: ಇದನ್ನು ಹೇಳಿದವರು ಸುಳ್ಳು ಹೇಳುತ್ತಾರೆ. ಅವರಿಗೆ ಎರಡು ಪ್ರತಿಫಲಗಳಿವೆ, ಮತ್ತು ಹಝ್ರತ್ ಪೈಗಂಬರ್(ಸ) ತಮ್ಮ ಎರಡು ಬೆರಳುಗಳನ್ನು ಒಟ್ಟಿಗೆ ಇರಿಸಿ, ಅಂದರೆ ಎರಡು ಎಣಿಸುವುದು ಎಂದರ್ಥ, "ಅವರು ಒಬ್ಬ ಮಹಾನ್ ಹೋರಾಟಗಾರ" ಎಂದು ಹೇಳಿದರು. ಅವನಂತೆ ಈ ಭೂಮಿಯಲ್ಲಿ ನಡೆದಾಡಿದ ಅರಬ್ಬರು ಕಡಿಮೆ. ಒಂದು ವರದಿಯಲ್ಲಿ, "ಚಲಾ ಹೋ" ಎಂಬ ಪದವನ್ನು "ಪೈದಾ ಹೋ" (ಜನನ) ಎಂದು ಬದಲಾಯಿಸಲಾಗಿದೆ, ಅಂದರೆ ಆಮಿರ್ ನಂತಹ ಯಾವುದೇ ಅರಬ್ ಹುಟ್ಟಿಲ್ಲ. ಅವರು ಹೇಳಿದರು, "ಅವರಿಗೆ ಎರಡು ಪ್ರತಿಫಲಗಳು ಲಭಿಸಿವೆ." ಅವರಿಗೆ ಬಹುಮಾನ ಸಿಗಲಿಲ್ಲ ಎಂದು ಹೇಳುವವರು ತಪ್ಪು.

(ಸಹೀಹ್ ಬುಖಾರಿ, ಕಿತಾಬುಲ್ ಮಘಾಜಿ, ಖೈಬರ್ ಕದನದ ಅಧ್ಯಾಯ, 4196)

ಹಝ್ರತ್ ಪೈಗಂಬರ್(ಸ) ನಿರಂತರವಾಗಿ ಹತ್ತು ದಿನಗಳು ಯುದ್ಧ ಮಾಡುತ್ತಿದ್ದರು. ಪದೇ ಪದೇ ವಿಫಲರಾದ ಕಾರಣದಿಂದಲೂ ಸಹಾಬಿಯರು ಗಾಯಗೊಂಡ ಮತ್ತು ಎರಡು ಸಹಾಬಿಯರು ಹುತಾತ್ಮರಾದ ಕಾರಣದಿಂದಲೂ ಯಹೂದಿಯರ ಧೈರ್ಯ ಇನ್ನಷ್ಟು ಹೆಚ್ಚಾಗುತ್ತಿತ್ತು. ಕೊನೆಗೆ ಒಂದು ರಾತ್ರಿ ಹಝ್ರತ್ ಪೈಗಂಬರ್(ಸ) ಹೇಳಿದರು:

ಯಾರ ಕೈಗೆ ಅಲ್ಲಾಹನು ವಿಜಯವನ್ನು ದಯಪಾಲಿಸುವನೋ ಆ ವ್ಯಕ್ತಿಯ ಕೈಗೆ ನಾಳೆ ನಾನು ಧ್ವಜವನ್ನು ನೀಡುವೆನು. ಅವರು ಅಲ್ಲಾಹನನ್ನು ಮತ್ತು ಅವನ ಪ್ರವಾದಿಯನ್ನು ಪ್ರೀತಿಸುವವರಾಗಿದ್ದಾರೆ.

ಇದು ಬುಖಾರಿಯ ವರದಿಯಾಗಿದೆ. ಹಝ್ರತ್ ಬುರೈದಾ(ರ.ಅ) ಹೇಳುತ್ತಾರೆ, ನಾಳೆ ಗೆಲುವು ಸಾಧಿಸಲಾಗುವುದು ಎಂಬ ಸಂತೋಷದಲ್ಲಿ ನಾವು ಆ ರಾತ್ರಿಯನ್ನು ಕಳೆದೆವು, ಮತ್ತು ಜನರು ನಾಳೆ ಧ್ವಜ ಯಾರಿಗೆ ನೀಡಲಾಗುವುದು ಎಂದು ಯೋಚಿಸುತ್ತಾ ರಾತ್ರಿಯನ್ನು ಕಳೆದರು. ನಂತರ ಬೆಳಿಗ್ಗೆ ಬಂದಾಗ, ಎಲ್ಲಾ ಜನರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದರು. ಧ್ವಜ ತಮಗೆ ಸಿಗುತ್ತದೆ ಎಂದು ಎಲ್ಲರೂ ಆಶಿಸುತ್ತಿದ್ದರು ಮತ್ತು ಹಾರೈಸುತ್ತಿದ್ದರು. ಆ ದಿನಕ್ಕಿಂತ ಮೊದಲು ನಾನು ಅಮಾರತ್ ಅನ್ನು ಎಂದಿಗೂ ಇಷ್ಟಪಟ್ಟಿಲ್ಲ ಎಂದು ಹಝ್ರತ್ ಉಮರ್(ರ.ಅ) ಹೇಳುತ್ತಾರೆ. ನಮ್ಮಲ್ಲಿ ಯಾರಿಗೂ ಹಝ್ರತ್ ಪೈಗಂಬರ್(ಸ)ರು ಅವರಿಂದ ಯಾವುದೇ ಸ್ಥಾನಮಾನವನ್ನು ಪಡೆಯುವ ಬಯಕೆ ಇರಲಿಲ್ಲ, ಆದರೆ ಇಂದು ಎಲ್ಲರೂ ಆ ಧ್ವಜವನ್ನು ಪಡೆಯಲು ಬಯಸುತ್ತಿದ್ದರು ಎಂದು ಹಝ್ರತ್ ಬುರೈದಾ(ರ.ಅ) ಹೇಳುತ್ತಾರೆ. ನನಗೆ ಧ್ವಜ ಸಿಗಲಿ ಎಂದು ನಾನು ನನ್ನ ಹಿಮ್ಮಡಿಯನ್ನು ಮೇಲಕ್ಕೆತ್ತಿ ತಲೆ ಎತ್ತಿ ಹಿಡಿದಿದ್ದೇನೆ ಎಂದು ಅವರು ಹೇಳುತ್ತಾರೆ. ಹಝ್ರತ್ ಸಲಮಾ(ರ.ಅ) ಮತ್ತು ಹಝ್ರತ್ ಜಾಬಿರ್(ರ.ಅ) ರವರು ಹಝ್ರತ್ ಅಲಿ(ರ.ಅ) ರವರು ಹಝ್ರತ್ ಪೈಗಂಬರ್(ಸ)ರಿಗಿಂತ ಹಿಂದುಳಿದಿದ್ದರು ಎಂದು ವರದಿ ಮಾಡುತ್ತಾರೆ. ಅನಾರೋಗ್ಯದ ಕಾರಣ ಖೈಬರ್‌ಗೆ ಪ್ರಯಾಣ ಮಾಡುವಾಗ ಅವರು ಅವರೊಂದಿಗೆ ಬರಲಿಲ್ಲ, ಆದರೆ ನಂತರ ಅವರ ಕಣ್ಣುಗಳಲ್ಲಿ ತೀವ್ರ ನೋವು ಮತ್ತು ನೋಡಲು ಸಾಧ್ಯವಾಗದ ಕಾರಣ ಅವರು ಆತಂಕದಿಂದ ಹೊರಟುಹೋದರು. ಹಝ್ರತ್ ಪೈಗಂಬರ್(ಸ)ರು ಖೈಬರ್‌ಗೆ ಹೊರಟಾಗ, ಹಝ್ರತ್ ಅಲಿ(ರ) ಯೋಚಿಸಿದರು, "ನಾನು ಹಝ್ರತ್ ಪೈಗಂಬರ್(ಸ)ರ ಹಿಂದೆ ಹೇಗೆ ಇರಲು ಸಾಧ್ಯ?" ಹಝ್ರತ್ ಅಲಿ(ರ.ಅ) ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾಗುವವರೆಗೂ ಅವರನ್ನು ಹಿಂಬಾಲಿಸಿದರು. ಹಝ್ರತ್ ಬುರೈದಾ(ರ) ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ)ರು ಬೆಳಿಗ್ಗೆ ಎದ್ದಾಗ, ಅವರು ಬೆಳಗಿನ ನಮಾಝನ್ನು ನಿರ್ವಹಿಸಿದರು. ನಂತರ ಅವರು ಧ್ವಜವನ್ನು ತರೆಸಿ, ಎದ್ದು ನಿಂತು ಜನರಿಗೆ ಉಪದೇಶ ಮಾಡಿದರು. ನಂತರ ಅವರು, "ಅಲಿ ಎಲ್ಲಿದ್ದಾರೆ?" ಎಂದು ಕೇಳಿದರು. ಅಲಿಯ ಕಣ್ಣುಗಳಲ್ಲಿ ನೋವು ಇದೆ ಎಂದು ಸಹಾಬಿಯರು ಹೇಳಿದರು. ಅವರು ಹೇಳಿದರು: ಅಲಿಗೆ ಕರೆಯಿರಿ. ಹಝ್ರತ್ ಸಲಮಾ(ರ.ಅ) ಹೇಳುತ್ತಾರೆ: ನಾನು ಹಝ್ರತ್ ಅಲಿ(ರ.ಅ) ಅವರನ್ನು ಕರೆತಂದೆನು. ಹಝ್ರತ್ ಪೈಗಂಬರ್(ಸ)ರು ಅವರನ್ನು ಕೇಳಿದರು: ಅವರಿಗೆ ಏನಾಯಿತು? ಹಝ್ರತ್ ಅಲಿ(ರ.ಅ) ಹೇಳಿದರು, "ನನ್ನ ಕಣ್ಣುಗಳು ತುಂಬಾ ನೋಯುತ್ತಿವೆ, ನನ್ನ ಮುಂದೆ ಏನಿದೆ ಎಂದು ನನಗೆ ನೋಡಲು ಸಾಧ್ಯವಿಲ್ಲ." ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಹತ್ತಿರ ಬನ್ನಿ. ಹಝ್ರತ್ ಅಲಿ(ರ.ಅ) ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ)ರು ನನ್ನ ತಲೆಯನ್ನು ನಿಮ್ಮ ಮಡಿಲಲ್ಲಿ ಇರಿಸಿ, ನಂತರ ಅವರು ತಮ್ಮ ಕೈಯಲ್ಲಿ ಲಾಲಾರಸವನ್ನು ತೆಗೆದುಕೊಂಡು ನನ್ನ ಕಣ್ಣುಗಳಿಗೆ ಹಚ್ಚಿದರು. ಹಝ್ರತ್ ಅಲಿ(ರ.ಅ) ತಮ್ಮ ಕಣ್ಣುಗಳು ಎಂದಿಗೂ ನೋವನ್ನು ಅನುಭವಿಸಿಲ್ಲ ಎಂಬಂತೆ ಚೇತರಿಸಿಕೊಂಡವು ಎಂದು ಹೇಳುತ್ತಾರೆ. ನಂತರ, ಅವರು ಸಾಯುವವರೆಗೂ, ಅವರ ಕಣ್ಣುಗಳು ಎಂದಿಗೂ ನೋವನ್ನು ಅನುಭವಿಸಲಿಲ್ಲ. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ) ಗಾಗಿ ಪ್ರಾರ್ಥಿಸಿದರು ಮತ್ತು

ಅವರಿಗೆ ಧ್ವಜವನ್ನು ನೀಡಿದರು.

(ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–5, ಪುಟ–124, 125, ದಾರುಲ್ ಕುತುಬ್ ಇಲ್ಮಿಯಾ, ಬೈರುತ್) (ದಾಎರಾ ಮಾರಿಫ್ ಸೀರತ್ ಮುಹಮ್ಮದ್ ರಸುಲುಲ್ಲಾಹ್(ಸ), ಸಂಪುಟ–8, ಪುಟ–390, ಬಝ್ಮ್ ಇಕ್ಬಾಲ್, ಲಾಹೋರ್) (ಬುಖಾರಿ ಕಿತಾಬುಲ್ ಮಗ್‌ಾಝಿ ಹದೀಸ್–4209)

ಹಝ್ರತ್ ಮುಸ್ಲೆಹ್ ಮೌಊದ್(ರ) ಕೂಡ ಈ ಘಟನೆಯನ್ನು ಉಲ್ಲೇಖಿಸಿದ್ದಾರೆ. ಅವರು ಹೇಳುತ್ತಾರೆ:

"ಖೈಬರ್ ದಿನದಂದು, ಹಝ್ರತ್ ಅಲಿ(ರ.ಅ) ಅವರಿಗೆ ಒಂದು ಅವಕಾಶ ಲಭಿಸಿತು. ಹಝ್ರತ್ ಪೈಗಂಬರ್(ಸ) ಹೇಳಿದರು: ಇಂದು ನಾನು ಅಲ್ಲಾಹನನ್ನು ಪ್ರೀತಿಸುವವನಿಗೆ ಮತ್ತು ಅಲ್ಲಾಹನು ಪ್ರೀತಿಸುವವನಿಗೆ ಒಂದು ಅವಕಾಶವನ್ನು ನೀಡುತ್ತೇನೆ ಮತ್ತು ಅಲ್ಲಾಹನು ಶ್ರೇಷ್ಠತೆಯನ್ನು ನೀಡಿದವನಿಗೆ ನಾನು ಕತ್ತಿಯನ್ನು ಹಸ್ತಾಂತರಿಸುತ್ತೇನೆ. ಹಝ್ರತ್ ಉಮರ್(ರ.ಅ) ಹೇಳುತ್ತಾರೆ, ನಾನು ಈ ಸಭೆಯಲ್ಲಿ ಹಾಜರಿದ್ದೆ ಮತ್ತು ಹಝ್ರತ್ ಪೈಗಂಬರ್(ಸ) ನನ್ನನ್ನು ನೋಡಿ ನನಗೆ ಕೊಡುವಂತೆ ನನ್ನ ತಲೆಯನ್ನು ಎತ್ತಿದೆ. ಆದರೆ ಅವರು(ಸ.ಅ) ನನ್ನನ್ನು ನೋಡಿ ಮೌನವಾಗಿರುತ್ತಿದ್ದರು. ಪುನಃ ನಾನು ನನ್ನ ತಲೆಯನ್ನು ಮೇಲಕ್ಕೆತ್ತಿ ನೋಡುತ್ತಿದ್ದೆ ಮತ್ತು ನೀವು ನನ್ನು ನೋಡಿ ಮೌನವಾಗಿರುತ್ತಿದ್ದರು. ಹಝ್ರತ್ ಅಲಿ(ರ.ಅ) ಬಂದರು ಅವರ ಕಣ್ಣುಗಳು ತುಂಬಾ ನೋಯುತ್ತಿದ್ದವು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲಿ! ಮುಂದೆ ಬಾ. ಅವರು ನಿಮ್ಮ(ಸ) ಬಳಿಗೆ ಬಂದಾಗ, ನೀವು ಅವರ ಕಣ್ಣುಗಳಿಗೆ ಲಾಲಾರಸವನ್ನು ಹಚ್ಚಿ ಹೇಳಿದರು, ಸರ್ವಶಕ್ತನಾದ ಅಲ್ಲಾಹನು ನಿಮ್ಮ ಕಣ್ಣುಗಳನ್ನು ಗುಣಪಡಿಸಲಿ. ಸರ್ವಶಕ್ತನಾದ ಅಲ್ಲಾಹನು ನಿಮಗೆ ವಹಿಸಿಕೊಟ್ಟ ಈ ಕತ್ತಿಯನ್ನು ತೆಗೆದುಕೊಳ್ಳಿ. (ಖುತ್‌ಬಾತೆ ಮಹ್ಮೂದ್, ಸಂಪುಟ–19, ಪುಟ–614)

ಇನ್ನೊಂದು ಸ್ಥಳದಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ) ಹೀಗೆ ಬರೆದಿದ್ದಾರೆ:

"ಒಂದು ದಿನ, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರಿಗೆ ಈ ನಗರದ ವಿಜಯವು ಹಝ್ರತ್ ಅಲಿ(ರ) ಅವರ ಕೈಗಳಿಗೆ ಮೀಸಲಾಗಿದೆ ಎಂದು ಹೇಳಿದರು. ಅವರು ಬೆಳಿಗ್ಗೆ ಇಸ್ಲಾಂನ ಕಪ್ಪು ಧ್ವಜವನ್ನು ಅಲ್ಲಾಹನು, ಅವನ ಸಂದೇಶವಾಹಕರು ಮತ್ತು ಮುಸ್ಲಿಮರು ಪ್ರೀತಿಸುವವನ ಕೈಯಲ್ಲಿ ಇಡುವುದಾಗಿ ಘೋಷಿಸಿದರು. ಸರ್ವಶಕ್ತನಾದ ಅಲ್ಲಾಹನು ಈ ಕೋಟೆಯ ವಿಜಯವನ್ನು ಅವರ ಕೈಯಲ್ಲಿ ನಿಗದಿಪಡಿಸಿದ್ದಾನೆ. ಮರುದಿನ ಬೆಳಿಗ್ಗೆ, ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ) ಅವರನ್ನು ಕರೆದು ಧ್ವಜವನ್ನು ಅವರಿಗೆ ಹಸ್ತಾಂತರಿಸಿದರು.

ಅವರು ಸಹಾಬಗಳ ಸೈನ್ಯದೊಂದಿಗೆ ಕೋಟೆಯ ಮೇಲೆ ದಾಳಿ ಮಾಡಿದರು. ಯಹೂದಿಗಳು ಕೋಟೆಯಲ್ಲಿದ್ದರೂ, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಅಲಿ(ರ.ಅ) ಮತ್ತು ಇತರ ಸಹಾಬರಿಗೆ ಆ ದಿನ ಅದೆಷ್ಟು ಶಕ್ತಿಯನ್ನು ನೀಡಿದನೆಂದರೆ, ಸಂಜೆಯ ಮೊದಲು ಮೊದಲ ಕೋಟೆಯನ್ನು ವಶಪಡಿಸಿಕೊಳ್ಳಲಾಯಿತು."

(ದೀಬಾಚ ತಫ್ಸಿರ್ ಅಲ್–ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟಗಳು–325–326)

ಹಝ್ರತ್ ಅಲಿ(ರ.ಅ) ಧ್ವಜವನ್ನು ಹೊತ್ತುಕೊಂಡು ಕೋಟೆಯ ಕೆಳಭಾಗಕ್ಕೆ ಓಡಿ ಹೋಗಿ ಕಲ್ಲುಗಳ ನಡುವೆ ನೆಟ್ಟರು.

(ಸೀರತ್ ಇಬ್ನ್ ಹಿಶಾಮ್, ಪುಟ–697, ದಾರುಲ್ ಕುತುಬ್ ಇಲ್ಮಿಯಾ, ಬೈರುತ್)

ಶತ್ರುಗಳ ವಧೆಯ ಬಗ್ಗೆ ಹೀಗೆ ಪ್ರಸ್ತಾಪವಿದೆ, ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ: ಖೈಬರ್ ಕೋಟೆಗಳಿಂದ ಹೋರಾಡಲು ಮೊದಲು ಹೊರಟ ವ್ಯಕ್ತಿ ಮರ್ಹಬ್‌ನ ಸಹೋದರ ಹಾರಿಸ್ ಆಗಿದ್ದಾನೆ. ಹಝ್ರತ್ ಅಲಿ(ರ.ಅ) ಅವನನ್ನು ವಧಿಸಿದರು, ಆಗ ಹಾರಿಸ್‌ನ ಸಹಚರರು ಕೋಟೆಗೆ ಮರಳಿದರು.

